# ಜುಮ್ (ZÚME)

ಜುಮ್ (ZÚME) ಮಾರ್ಗದರ್ಶಿ ಪುಸ್ತಕ

# ಅನುಕ್ರಮಣಿಕೆ


ಸ್ವಾಗತ 3

S.O.A.P.S. ಸತ್ಯವೇದವನ್ನು ಓದುವದು 5

ಒಪ್ಪಿಸಬೇಕಾದ ಗುಂಪುಗಳು 6

ಪ್ರಾರ್ಥನೆಯ ಕಾಲಚಕ್ರ 8

100 ಮಂದಿಯ ಪಟ್ಟಿ 9

ದೇವರ ಕಥೆ [ಸುವಾರ್ತೆ] 14

ಸೃಷ್ಟಿಯಿಂದ ನ್ಯಾಯತೀರ್ಪಿನ ವರೆಗೆ 14

ದೀಕ್ಷಸ್ನಾನ 16

3-ನಿಮಿಷದ ಸಾಕ್ಷಿ 18

ಕರ್ತನ ಭೋಜನ 19

ಪ್ರಾರ್ಥನಾ ನಡಿಗೆ 21

ಬಿ.ಎಲ್.ಇ.ಎಸ್.ಎಸ್. (B.L.E.S.S.) ಪ್ರಾರ್ಥಿಸಿರಿ 23

3/3 ಗುಂಪುಗಳ ವ್ಯವಸ್ಥೆ 24

ತರಬೇತಿ ಕಾಲಚಕ್ರ 27

ನಾಯಕತ್ವದ ಚಿಕ್ಕಗುಂಪುಗಳು 30

3-ತಿಂಗಳ ಯೋಜನೆ 32

ತರಬೇತಿ ಪರಿಶೀಲನಾಪಟ್ಟಿ 34

ಆಪ್ತ ಸಲೆಹೆಗಾರರ ಗುಂಪುಗಳು 37

ನಾಲ್ಕು ಕ್ಷೇತ್ರಗಳ ವಿಶ್ಲೇಷಣಾತ್ಮಕ ರೇಖಾಚಿತ್ರ 38

ಸರಳ ಸಭೆ – ತಲೆಮಾರಿನ ನಕ್ಷೆ 39

ಅನುಬಂಧ 40

# ಜುಮ್ (ZÚME) ತರಬೇತಿಗೆ ಸ್ವಾಗತ!

ನೀವು ಇಲ್ಲಿರುವದಕ್ಕಾಗಿ ನಾವು ಸಂತೋಷಪಡುತ್ತೇವೆ!

ಆತನ ಮಹಾಆಜ್ಞೆಗೆ ಹೇಗೆ ವಿಧೇಯರಾಗಬೇಕು ಮತ್ತು ಹೆಚ್ಚಿಸುವ ಶಿಷ್ಯರನ್ನು ಮಾಡಲು ಕಲಿಯುವದಕ್ಕಾಗಿ ಯೇಸುವನ್ನು ಹಿಂಬಾಲಿಸುವ ಚಿಕ್ಕ ಗುಂಪುಗಳಿಗಾಗಿ ಜುಮ್ (ZÚME) ಆನ್ ಲೈನ್ ಮತ್ತು ಅಂತರ್ಯದ ಜೀವನವನ್ನು ಕುರಿತು ಕಲಿಯುವ ಅನುಭವನ್ನು ರೂಪಿಸಲಾಗಿದೆ.

## ಅಧಿವೇಶನದ ಮಾದರಿ

ಜುಮ್ (ZÚME) ತರಬೇತಿಯು 9 ಮೂಲ ಅಧಿವೇಶನಗಳನ್ನು ಮತ್ತು ಒಂದು ಮುಂದುವರೆದ ಅಧಿವೇಶನವನ್ನು ಒಳಗೊಂಡಿದೆ [ನಿಮ್ಮ ಆರಂಭದ ತರಬೇತಿ ಪೂರ್ಣಗೊಂಡ ನಂತರ ನಿಮ್ಮ ಗುಂಪು ಇದಕ್ಕೆ ಹಿಂದಿರುಗಬಹುದು]. ಪ್ರತಿಯೊಂದು ಅಧಿವೇಶನವು ಸುಮಾರು 2 ಗಂಟೆಗಳು ಇರುತ್ತದೆ ಮತ್ತು ಇವುಗಳನ್ನು ಒಳಗೊಂಡಿರುತ್ತವೆ:

- ನಿಮ್ಮ ಗುಂಪು ಶಿಷ್ಯರನ್ನು ಹೆಚ್ಚಿಸುವ ಮೂಲ ತತ್ವಗಳನ್ನು ತಿಳಿದುಕೊಳ್ಳಲು ಸಹಾಮಾಡುವ ವಿಡಿಯೋ ಮತ್ತು ಆಡಿಯೋ.
- ಹಂಚಿಕೊಂಡ ವಿಷಯಗಳನ್ನು ಕುರಿತು ಆಲೋಚಿಸಲು ನಿಮ್ಮ ಗುಂಪಿಗೆ ಸಹಾಯಮಾಡಲು ಗುಂಪಿನಲ್ಲಿ ಚರ್ಚೆ.
- ನೀವು ಕಲಿತವುಗಳನ್ನು ಪ್ರಯೋಗಕ್ಕೆ ಹಾಕಲು ಸಹಾಯಮಾಡಲು ಸರಳ ಚಟುವಟಿಕೆಗಳು.
- ನಿಮ್ಮ ಗುಂಪಿನ ಅಧಿವೇಶನಗಳ ನಡುವೆ ಕಲಿಯುತ್ತಿರಲು ಮತ್ತು ಬೆಳೆಯುತ್ತಿರಲು ಸಹಾಯಮಾಡಲು ಅಧೀವೇಶನದ ಸವಾಲುಗಳು.

## ಆರಂಭದ ಮತ್ತು ಮುಕ್ತಾಯದ ಪ್ರಾರ್ಥನೆ

ಲೋಕದೆಲ್ಲೆಡೆ ಯೇಸುವಿನ ಅನೇಕ ಹಿಂಬಾಲಕರು ನಿಮಗಾಗಿ ಮತ್ತು ನಿಮ್ಮ ಗುಂಪಿಗಾಗಿ ಪ್ರಾರ್ಥಿಸುತ್ತಿದ್ದಾರೆ, ಮತ್ತು ಈ ಪುಸ್ತಕದಲ್ಲಿರುವ ಕಾರ್ಯಗಳನ್ನು ನೀವು ಮಾಡುತ್ತಿರುವಾಗ ನಾವು ಪ್ರಾರ್ಥಿಸಲು ಮುಂದುವರೆಸುತ್ತೇವೆ. ನಿಮ್ಮ ಗುಂಪು ಸಹ ಪ್ರಾರ್ಥಿಸುತ್ತದೆ ಎಂದು ಖಚಿತಪಡಿಸಿಕೊಳ್ಳಿರಿ.

ಪ್ರತಿಯೊಂದು ಅಧಿವೇಶನದ ಆರಂಭದಲ್ಲಿ, ನಿಮ್ಮ ಹೃದಯಗಳನ್ನು ಸಿದ್ಧಪಡಿಸಲು ಮತ್ತು ನಿಮ್ಮ ಸಮಯವನ್ನು ಒಟ್ಟಾಗಿ ಕಳೆಯಲು ಪವಿತ್ರಾತ್ಮನನ್ನು ಆಮಂತ್ರಿಸಲು ನಿಮ್ಮ ಗುಂಪಿನಿಂದ ಒಬ್ಬರನ್ನು [ಅಥವಾ ಅನೇಕರನ್ನು] ಕೇಳಿಕೊಳ್ಳಿರಿ. ಪ್ರತಿಯೊಬ್ಬರಿಗಾಗಿ ಆತನು ಬಯಸುವದೇನಂದರೆ - ಆತನನ್ನು ಹೆಚ್ಚಾಗಿ ತಿಳಿಯಬೇಕು ಮತ್ತು ಪ್ರೀತಿಸಬೇಕು ಎಂಬ ಅವಕಾಶಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಲು ನೆನಪಿಡಿ!

ಪ್ರತಿಯೊಂದು ಅಧಿವೇಶನದ ಅಂತ್ಯದಲ್ಲಿ, ಗುಂಪಾಗಿ ಪ್ರಾರ್ಥಿಸಲು ನಿಮಗೆ ಮತ್ತೊಮ್ಮೆ ಅವಕಾಶ ದೊರಕುತ್ತದೆ. ಬೇರೆಯವರೊಂದಿಗೆ ಆತನು ನಿಮಗೆ ಬೋಧಿಸುತ್ತಿರುವದನ್ನು ನೀವು ತಿಳಿದುಕೊಳ್ಳಲು, ಅನ್ವಯಿಸಲು ಮತ್ತು ಹಂಚಿಕೊಳ್ಳಲು ನಿಮಗೆ ಸಹಾಯಮಾಡಲು ದೇವರನ್ನು ಬೇಡಿಕೊಳ್ಳುವ ಅವಕಾಶವನ್ನು ತೆಗೆದುಕೊಳ್ಳಲು ಖಚಿತಪಡಿಸಿಕೊಳ್ಳಿರಿ. ನಿಮ್ಮ ಗುಂಪಿನಲ್ಲಿರುವ ನಿರ್ಧಿಷ್ಟವಾದ ಅಗತ್ಯತೆಗಳಿಗಾಗಿ ಪ್ರಾರ್ಥಿಸಲು ನೆನಪಿಡಿ.

## ಗುಂಪಿನಲ್ಲಿ ಚರ್ಚೆಗಳು

ನಿಮ್ಮ ಗುಂಪಿನೊಂದಿಗೆ ನೀವು ಕಲಿಯುತ್ತಿರುವ ಸಂಗತಿಗಳನ್ನು ಕುರಿತು ಮಾತನಾಡಲು ನಿಮಗೆ ಅನೇಕ ಅವಕಾಶಗಳಿರುವವು. ಗುಂಪಿನ ಚರ್ಚೆಯು ಸುಮಾರು 10 ನಿಮಿಷಗಳು ಇರಬೇಕು. ಪ್ರತಿಯೊಬ್ಬರೂ ಭಾಗವಹಿಸಿ ತಮ್ಮ ಆಲೋಚನೆಗಳನ್ನು ಮತ್ತು ದೃಷ್ಟಿಕೋನಗಳನ್ನು ಹಂಚಿಕೊಳ್ಳುವಂತೆ ಉತ್ತೇಜಿಸಿರಿ. ನಿಮ್ಮ ಗುಂಪಿನಲ್ಲಿರುವ ಒಬ್ಬರ ಮೂಲಕ ದೇವರು ಹಂಚಿಕೊಳ್ಳಬೇಕೆಂದು ಬಯಸುವ ಸಂಗತಿಗಳನ್ನು ತಪ್ಪಿಸಬೇಡಿರಿ.

## ಪರಿಶೀಲಿಸಿರಿ

ನೀವು ಕಲಿತವುಗಳಿಗೆ ಹೇಗೆ ವಿಧೇಯರಾಗುತ್ತಿದ್ದೀರಿ ಮತ್ತು ಹಂಚಿಕೊಳ್ಳುತ್ತಿದ್ದೀರಿ ಎಂದು ನೋಡಲು ಕೋರ್ಸ್ ಆದ್ಯಂತ ನಿಮ್ಮ ಗುಂಪು ಒಬ್ಬರಿಗೊಬ್ಬರು ಪರಿಶೀಲಿಸಿಕೊಳ್ಳಲು ಅವಕಾಶವನ್ನು ಹೊಂದಿರುವರು. ತರಬೇತಿಯ ಈ ಮುಖ್ಯಭಾಗವನ್ನು ತಪ್ಪಿಸಬೇಡಿರಿ, ಆದರೆ ವಿಮರ್ಶನಾತ್ಮಕವಾಗಬೇಡಿರಿ. ಇತರರು ಬೆಳೆಯಲು ಸಹಾಯಮಾಡುವ ನಮ್ರತೆಯ ಹೃದಯವನ್ನು ಹೊಂದಿಕೊಳ್ಳಲು ದೇವರನ್ನು ಬೇಡಿಕೊಳ್ಳಿರಿ!

ಆರಂಭಿಸಲು ಸಿದ್ಧವಾಗಿದ್ದೀರಾ? ನಾವು ಈಗ ಹೋಗೋಣ!

# ಅಧಿವೇಶನ 01

ಈ ಅಧಿವೇಶನದ ಜುಮ್ (ZÚME) ತರಬೇತಿಯಲ್ಲಿ, ಶಿಷ್ಯರನ್ನಾಗಿ ಮಾಡುವ ಎರಡು ಮೂಲತತ್ವಗಳನ್ನು ಕುರಿತು ಕಲಿಯುತ್ತೇವೆ ಮತ್ತು ಹೆಚ್ಚಿಸುವಂತ ಶಿಷ್ಯರನ್ನು ಮಾಡುವದಕ್ಕಾಗಿ ಎರಡು ಸರಳ ಸಾಧನಗಳನ್ನು ಅನ್ವೇಷಿಸುತ್ತೇವೆ.

## S.O.A.P.S. ಸತ್ಯವೇದವನ್ನು ಓದುವದು

ಯೇಸುವಿನ ಹಿಂಬಾಲಕರಾದ ನಾವು ವಾಕ್ಯವನ್ನು ಪ್ರತಿದಿನ ಓದಬೇಕಾಗಿದೆ. ಪ್ರತಿವಾರ ಸತ್ಯವೇದದಲ್ಲಿರುವ ಕನಿಷ್ಠ 25-30 ಅಧ್ಯಾಯಗಳನ್ನು ಓದುವದು ಒಂದು ಒಳ್ಳೆಯ ಮಾರ್ಗದರ್ಶನವಾಗಿದೆ. S.O.A.P.S. ಸತ್ಯವೇದ ಓದುವ ಮಾದರಿಯನ್ನು ಉಪಯೋಗಿಸಿ ದಿನಚರಿಯನ್ನು ಬರೆಯಿರಿ, ಇದು ಇನ್ನೂ ಹೆಚ್ಚಾಗಿ ನಿಮಗೆ ಅರ್ಥಮಾಡಿಕೊಳ್ಳಲು, ವಿಧೇಯರಾಗಲು ಮತ್ತು ಹಂಚಿಕೊಳ್ಳಲು ಸಹಾಯ ಮಾಡುತ್ತದೆ. S.O.A.P.S. ಅಂದರೆ:

- S ವಾಕ್ಯ: ಇಂದು ನಿಮಗೆ ವಿಶೇಷವಾಗಿ ಅರ್ಥಗರ್ಭಿತವಾಗಿರುವ ಒಂದು ಅಥವಾ ಹೆಚ್ಚು ವಚನಗಳನ್ನು ಬರೆಯಿರಿ.
- O ಅವಲೋಕನ: ಇನ್ನೂ ಉತ್ತಮವಾಗಿ ಅರ್ಥಮಾಡಿಕೊಳ್ಳಲು ಆ ವಚನಗಳನ್ನು ಅಥವಾ ಮುಖ್ಯ ಅಂಶಗಳನ್ನು ನಿಮ್ಮ ಸ್ವಂತ ಮಾತುಗಳಲ್ಲಿ ತಿರಿಗಿ ಬರೆಯಿರಿ.
- A ಅನ್ವಯ: ನಿಮ್ಮ ಸ್ವಂತ ಜೀವನದಲ್ಲಿ ಈ ಆಜ್ಞೆಗಳಿಗೆ ವಿಧೇಯರಾಗುವದು ಎಂದರೆ ಏನೆಂಬುದನ್ನು ಕುರಿತು ಆಲೋಚಿಸಿ.
- P ಪ್ರಾರ್ಥನೆ: ನೀವು ಏನನ್ನು ಕಲಿತಿದ್ದೀರಿ ಮತ್ತು ನೀವು ಹೇಗೆ ವಿಧೇಯರಾಗಲು ಯೋಜನೆ ಮಾಡುತ್ತಿರೆಂದು ದೇವರಿಗೆ ಹೇಳುವ ಪ್ರಾರ್ಥನೆಯನ್ನು ಬರೆಯಿರಿ.
- S ಹಂಚಿಕೊಳ್ಳುವದು: ನೀವು ಕಲಿತದ್ದನ್ನು/ಅನ್ವಯಿಸಿದ್ದನ್ನು ಯಾರೊಂದಿಗೆ ಹಂಚಿಕೊಳ್ಳಬೇಕೆಂದು ದೇವರು ಬಯಸುತ್ತಾನೆಂದು ಕೇಳಿಕೊಳ್ಳಿರಿ.

S.O.A.P.S. ಕಾರ್ಯಮಾಡುತ್ತಿರುವ ಒಂದು ಉದಾಹರಣೆ ಇಲ್ಲಿ ಕೊಡಲ್ಪಟ್ಟಿದೆ:

**S** – "ಯೆಹೋವನು ಹೀಗನ್ನುತ್ತಾನೆ - ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ. ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ." [ಯೆಶಾಯ 55:8-9]

**O** – ಮಾನವನಾದ ನಾನು, ನನಗೆ ತಿಳಿದಿರುವ ಮತ್ತು ಹೇಗೆ ಮಾಡಬೇಕೆಂದು ನನಗೆ ತಿಳಿದಿರುವ ಸಂಗತಿಗಳಲ್ಲಿ ನಾನು ಸೀಮಿತವಾಗಿದ್ದೇನೆ. ದೇವರು ಯಾವುದೇ ರೀತಿಯಲ್ಲಿ ಮಿತಿಯನ್ನು ಹೊಂದಿರುವದಿಲ್ಲ. ಆತನು ಎಲ್ಲವನ್ನು ನೋಡುವಾತನು ಮತ್ತು ತಿಳಿದಾತನು ಆಗಿದ್ದಾನೆ. ಆತನು ಏನು ಬೇಕಾದರೂ ಮಾಡಬಲ್ಲನು.

**A** – ದೇವರು ಎಲ್ಲವನ್ನು ತಿಳಿದಿರುವದರಿಂದ ಮತ್ತು ಆತನ ಮಾರ್ಗಗಳು ಒಳ್ಳೆಯದಾಗಿರುವದರಿಂದ, ನನ್ನ ಸ್ವಂತ ರೀತಿಯಲ್ಲಿ ಕಾರ್ಯಗಳನ್ನು ಮಾಡುವದಕ್ಕೆ ಬದಲಾಗಿ ನಾನು ಆತನನ್ನು ಹಿಂಬಾಲಿಸಿದರೆ ಜೀವನದಲ್ಲಿ ಹೆಚ್ಚು ಯಶಸ್ವಿಯಾಗುವೆನು.

**P** – ಕರ್ತನೇ, ನಿನ್ನನ್ನು ಮೆಚ್ಚಿಸುವ ಮತ್ತು ಇತರರಿಗೆ ಸಹಾಯ ಮಾಡುವಂತ ಒಳ್ಳೇ ಜೀವಿತವನ್ನು ಹೇಗೆ ನಡೆಸಬೇಕೆಂದು ನನಗೆ ತಿಳಿದಿಲ್ಲ. ನನ್ನ ಮಾರ್ಗಗಳು ತಪ್ಪುಗಳಿಗೆ ನಡೆಸುತ್ತವೆ. ನನ್ನ ಆಲೋಚನೆಗಳು ನೋವಿಗೆ ನಡೆಸುತ್ತವೆ. ದಯವಿಟ್ಟು ನನಗೆ ನಿನ್ನ ಮಾರ್ಗಗಳನ್ನು ಮತ್ತು ನಿನ್ನ ಆಲೋಚನೆಗಳನ್ನು ಕಲಿಸು. ನಾನು ನಿನ್ನನ್ನು ಹಿಂಬಾಲಿಸುವಾಗ ನಿನ್ನ ಪವಿತ್ರಾತ್ಮನು ನನ್ನನ್ನು ಮಾರ್ಗದರ್ಶಿಸಲಿ.

**S** – ನಾನು ಈ ವಚನಗಳನ್ನು ಮತ್ತು ಈ ಅನ್ವಯವನ್ನು ನನ್ನ ಸ್ನೇಹಿತನಾದ ಸ್ಟೀವ್ ನೊಂದಿಗೆ ಹಂಚಿಕೊಳ್ಳುತ್ತೇನೆ, ಈತನು

ಕಷ್ಟಕರವಾದ ಸಮಯವನ್ನು ಹಾದುಹೋಗುತ್ತಿದ್ದಾನೆ ಮತ್ತು ಅವನು ಎದುರಿಸುತ್ತಿರುವ ಮುಖ್ಯವಾದ ತೀರ್ಮಾನಗಳಿಗೆ ಮಾರ್ಗದರ್ಶನವು ಅಗತ್ಯವಾಗಿದೆ.

## ಒಪ್ಪಿಸಬೇಕಾದ ಗುಂಪುಗಳು

ಒಂದೇ ಲಿಂಗದ ಒಬ್ಬರು ಅಥವಾ ಇಬ್ಬರನ್ನು ಒಳಗೊಂಡಿರುವ ಲೆಕ್ಕ ಒಪ್ಪಿಸಬೇಕಾದ ಗುಂಪು ಮಾಡಲ್ಪಟ್ಟಿರುತ್ತವೆ – ಪುರುಷರು ಪುರುಷರೊಂದಿಗೆ, ಸ್ತ್ರೀಯರು ಸ್ತ್ರೀಯರೊಂದಿಗೆ, - ಎಲ್ಲಿ ಕಾರ್ಯಗಳು ಸರಿಯಾಗಿ ಹೋಗುತ್ತಿವೆ ಮತ್ತು ತಿದ್ದುಪಡಿ ಅಗತ್ಯವಿರುವ ಇತರೆ ಭಾಗಗಳನ್ನು ತಿಳಿಯಪಡಿಸಲು ಸಹಾಯಮಾಡುವದಕ್ಕಾಗಿ ಇರುವ ಪ್ರಶ್ನೆಗಳನ್ನು ಚರ್ಚಿಸಲು ವಾರಕ್ಕೊಮ್ಮೆ ಸೇರುವರು. ಅವರು ಮುಖಾಮುಖಿಯಾಗಿ ಬೇಟಿಯಾಗಲು ಆಗದೆ ಇದ್ದರೆ ದೂರವಾಣಿ ಮೂಲಕ ಸಹ ಸಂಪರ್ಕಿಸಬಹುದು. ಹಂಚಿಕೊಂಡ ಸಂಗತಿಯು ಗೌಪ್ಯವಾದದ್ದೆಂದು ಗುಂಪಿನಲ್ಲಿರುವ ಪ್ರತಿಯೊಬ್ಬರು ತಿಳಿದುಕೊಳ್ಳಬೇಕಾಗಿದೆ.

**ಚಟುವಟಿಕೆ** [45 ನಿಮಿಷ] - ಒಂದೇ ಲಿಂಗದ ಜನರನ್ನು ಇಬ್ಬರು ಅಥವಾ ಮೂವರ ಗುಂಪನ್ನಾಗಿ ವಿಂಗಡಿಸಿ. ಕೆಳಗೆ ಕೊಡಲ್ಪಟ್ಟಿರುವ ಲೆಕ್ಕ ಒಪ್ಪಿಸಬೇಕಾದ ಪ್ರಶ್ನೆಗಳನ್ನು ಕುರಿತು ಒಟ್ಟಾಗಿ ಕೆಲಸಮಾಡುತ್ತಾ ಮುಂದಿನ 45 ನಿಮಿಷಗಳನ್ನು ಕಳೆಯಿರಿ - ಕೆಳಗೆ ಕೊಡಲ್ಪಟ್ಟಿರುವ ಪಟ್ಟಿ 2. ಈ ಅಧಿವೇಶನಕ್ಕಿಂತ ಮುಂಚಿತವಾಗಿ ಗುಂಪಾಗಿ ಒಟ್ಟಾಗಿ ಓದದೆ ಇರುವದರಿಂದ, ಹಿಂದೆ ಓದಿದವುಗಳನ್ನು ಕುರಿತಾದ ಪ್ರಶ್ನೆಗಳನ್ನು ಕೇವಲ ಬಿಟ್ಟುಬಿಡಿರಿ. ನೀವು ತರಬೇತಿಯಲ್ಲಿ ಇನ್ನು ಮುಂದೆ ಹೋಗುವಾಗ ಪಟ್ಟಿ 1 ದೊಡ್ಡ ಆಯ್ಕೆಯಾಗಿರುತ್ತದೆ.

### ಲೆಕ್ಕ ಒಪ್ಪಿಸಬೇಕಾದ ಪ್ರಶ್ನೆಗಳು - ಪಟ್ಟಿ 1

ನಾವು ಯೇಸುವಿನಂತೆ ಆಗಲು ಪ್ರಾರ್ಥಿಸಿರಿ.

ನೀವು ಹೇಗಿದ್ದೀರಿ? ನಿಮ್ಮ ಪ್ರಾರ್ಥನಾ ಜೀವಿತವು ಹೇಗಿದೆ?

ನೀವು ಅರಿಕೆ ಮಾಡಬೇಕಾದ ಯಾವುದಾದರು ಪಾಪ ಉಂಟೋ? [ಸಂಬಂಧಗಳ, ಲೈಂಗಿಕ, ಹಣಕಾಸಿನ, ಹೆಮ್ಮೆ, ಸಮಗ್ರತೆ, ಅಧೀಕಾರಕ್ಕೆ ಅಧೀನರಾಗುವದು, ಇತ್ಯಾದಿ.]

ದೇವರು ನಿಮಗೆ ಕಳೆದ ಸಾರಿ ಹೇಳಿದವುಗಳಿಗೆ ವಿಧೇಯರಾಗಿದ್ದೀರಾ? ವಿವರವನ್ನು ಹಂಚಿಕೊಳ್ಳಿರಿ.

ನಿಮ್ಮ ಸಂಬಂಧಿಕರಲ್ಲಿರುವ "ಅವಿಶ್ವಾಸಿಗಳಿಗೆ" ನೀವು ಕಳೆದ ವಾರ ಪ್ರಾರ್ಥಿಸಿದ್ದೀರಾ? ಅವರಲ್ಲಿ ಯಾರಿಗಾದರು ಹಂಚಿಕೊಳ್ಳಲು ನಿಮಗೆ ಅವಕಾಶ ದೊರಕಿತಾ? ವಿವರವನ್ನು ಹಂಚಿಕೊಳ್ಳಿರಿ.

ಈ ವಾರ ನೀವು ಹೊಸ ವಚನವನ್ನು ಬಾಯಿಪಾಠ ಮಾಡಿದ್ದೀರಾ? ಅದನ್ನು ಹೇಳಿರಿ.

ಈ ವಾರದಲ್ಲಿ ಸತ್ಯವೇದದಲ್ಲಿರುವ ಕನಿಷ್ಠ 25 ಅಧ್ಯಾಯಗಳನ್ನು ಓದಿದ್ದೀರಾ? ಈ ವಾರದಲ್ಲಿ ವಾಕ್ಯದಿಂದ ದೇವರು ಏನು ಹೇಳಿದರು?

ಇದನ್ನು ಕುರಿತು ನೀವು ನಿರ್ಧಿಷ್ಟವಾಗಿ ಏನು ಮಾಡುವಿರಿ?

ಈ ವಾರದಲ್ಲಿ ನಿಮ್ಮ 3/3 ಗುಂಪುನ್ನು ಸಂಧಿಸಿದ್ದೀರಾ? ಅದು ಹೇಗೆ ನಡೆಯಿತು?

ಈ ವಾರದಲ್ಲಿ ಹೊಸ 3/3 ಗುಂಪುನ್ನು ಪ್ರಾರಂಭಿಸಲು ಯಾರಿಗಾದರು ನೀವು ಮಾದರಿಯಾಗಿದ್ದೀರಾ ಅಥವಾ ಸಹಾಯಮಾಡಿದ್ದೀರಾ? ವಿವರವನ್ನು ಹಂಚಿಕೊಳ್ಳಿರಿ. ಕ್ರಿಸ್ತನೊಂದಿಗೆ ನನ್ನ ನಡೆಗೆ ಅಡ್ಡಿಪಡಿಸುವ ಯಾವುದಾದರು ಸಂಗತಿಗಳನ್ನು ನೀವು ನೋಡುವಿರಾ?

ಈ ವಾರದಲ್ಲಿ ಸುವಾರ್ತೆಯನ್ನು ಸಾರಲು ನಿಮಗೆ ಅವಕಾಶ ದೊರಕಿತಾ? ವಿವರವನ್ನು ಹಂಚಿಕೊಳ್ಳಿರಿ. 1-3 ನಿಮಿಷ ಸಾಕ್ಷಿಯನ್ನು ಮತ್ತು ಸುವಾರ್ತೆಯನ್ನು ಈಗಲೇ ಅಭ್ಯಾಸ ಮಾಡಿರಿ.

ನೀವು ಮುಂದಿನ ವಾರ ಗುಂಪಿಗೆ ಯಾರನ್ನು ಆಮಂತ್ರಿಸುವಿರಿ? ಗುಂಪಿನಲ್ಲಿ ನಾಲ್ಕು ಅಥವಾ ಹೆಚ್ಚಿನ ಮಂದಿ ಇದ್ದರೆ, ಅದನ್ನು ಹೆಚ್ಚಿಸಿ. ಹಂಚಿಕೊಂಡದನ್ನು ಕುರಿತು ಪ್ರಾರ್ಥನೆಯಿಂದ ಮುಕ್ತಾಯಗೊಳಿಸಿ.

### ಲೆಕ್ಕ ಒಪ್ಪಿಸಬೇಕಾದ ಪ್ರಶ್ನೆಗಳ - ಪಟ್ಟಿ 2

ಕಳೆದ ವಾರ ನೀವು ಓದಿದವುಗಳಿಂದ ಬಂದ ನಿಮ್ಮ ಒಳನೋಟಗಳು ನೀವು ಆಲೋಚಿಸುವ ಮತ್ತು ನಡೆದುಕೊಳ್ಳುವ ರೀತಿಯನ್ನು ಹೇಗೆ ರೂಪಿಸಿದೆ? ಕಳೆದ ವಾರದ ನಿಮ್ಮ ಒಳನೋಟಗಳನ್ನು ಯಾರಿಗೆ ತಿಳಿಯಪಡಿಸಿದಿರಿ ಮತ್ತು ಅದನ್ನು ಹೇಗೆ ಸ್ವೀಕರಿಸಲಾಯಿತು?

ದೇವರು ಮಾಡುತ್ತಿರುವ ಕಾರ್ಯವನ್ನು ನೀವು ಹೇಗೆ ನೋಡಿದ್ದೀರಿ?

ನಿಮ್ಮ ಮಾತುಗಳು ಮತ್ತು ಕ್ರಿಯೆಗಳಿಂದ ಯೇಸು ಕ್ರಿಸ್ತನ ಶ್ರೇಷ್ಠತೆಯನ್ನು ಕುರಿತು ನೀವು ಈ ವಾರದಲ್ಲಿ ಸಾಕ್ಷಿಯಾಗಿದ್ದೀರಾ?

ನೀವು ಲೈಂಗಿಕತೆಯನ್ನು ಪ್ರಚೋಧಿಸುವ ಪುಸ್ತಕಗಳಿಗೆ ತೆರೆದವರಾಗಿದ್ದೀರಾ ಅಥವಾ ಸೂಕ್ತವಲ್ಲದ ಲೈಂಗಿಕ ಆಲೋಚನೆಗಳಿಂದ ನಿಮ್ಮ ಮನಸ್ಸನ್ನು ನಡಿಸಿಕೊಂಡಿದ್ದೀರಾ?

ನಿಮ್ಮ ಹಣವನ್ನು ಉಪಯೋಗಿಸಲು ನೀವು ದೇವರ ಒಡೆಯತ್ವವನ್ನು ಅರಿಕೆಮಾಡಿದ್ದೀರಾ?

ನೀವು ಯಾವುದಕ್ಕಾದರೂ ದುರಾಶೆಪಟ್ಟಿದ್ದೀರಾ?

ನಿಮ್ಮ ಮಾತುಗಳಿಂದ ನೀವು ಬೇರೊಬ್ಬರ ಹೆಸರು ಅಥವಾ ಭಾವನೆಗಳನ್ನು ನೋಯಿಸಿದ್ದೀರಾ?

ನೀವು ಮಾತುಗಳಲ್ಲಿ ಅಥವಾ ಕ್ರಿಯೆಯಲ್ಲಿ ಅಪ್ರಾಮಾಣಿಕರಾಗಿದ್ದೀರಾ ಅಥವಾ ಅತಿಯಾಗಿ ಮಾಡಿದ್ದೀರಾ?

ನೀವು ಚಟದ ನಡತೆಗೆ [ಅಥವಾ ಸೋಮಾರಿತನ ಅಥವಾ ಅಶಿಸ್ತಿಗೆ] ಒಪ್ಪಿಸಿದ್ದೀರಾ?

ವಸ್ತ್ರಗಳನ್ನು ಧರಿಸಿಕೊಳ್ಳುವದು, ಸ್ನೇಹಿತರು, ಕೆಲಸ ಅಥವಾ ಸೊತ್ತುಗಳಿಗೆ ಗುಲಾಮರಾಗಿದ್ದೀರಾ?

ಯಾರಿಗಾದರೂ ಕ್ಷಮಿಸಲು ವಿಫಲರಾಗಿದ್ದೀರಾ?

ನೀವು ಎಂಥಾ ವಿಧವಾದ ಚಿಂತೆಗಳು ಅಥವಾ ಆತಂಕಗಳನ್ನು ಎದುರಿಸುತ್ತಿದ್ದೀರಿ? ನೀವು ದೂರು ಹೇಳಿದ್ದೀರಾ ಅಥವಾ ಗುಣುಗುಟ್ಟಿದ್ದೀರಾ? ನೀವು ಕೃತಜ್ಞತೆಯುಳ್ಳ ಹೃದಯವನ್ನು ಕಾಪಾಡಿಕೊಂಡಿದ್ದೀರಾ?

ನಿಮ್ಮ ಪ್ರಾಮುಖ್ಯವಾದ ಸಂಬಂಧಗಳನ್ನು ನೀವು ಗೌರವಿಸುತ್ತಿದ್ದೀರಾ, ತಿಳಿದುಕೊಳ್ಳುತ್ತಿದ್ದೀರಾ ಮತ್ತು ಉದಾರತೆಯುಳ್ಳವರಾಗಿದ್ದೀರಾ?

ನಿಮ್ಮ ಆಲೋಚನೆ ಮಾತು ಅಥವಾ ಕ್ರಿಯೆಯಲ್ಲಿ ಯಾವ ಶೋಧನೆಗಳನ್ನು ಎದುರಿಸಿದ್ದೀರಾ ಮತ್ತು ನೀವು ಹೇಗೆ ಪ್ರತಿಕ್ರಿಯಿಸಿದ್ದೀರಿ?

ಇತರರಿಗೆ, ವಿಶೇಷವಾಗಿ ವಿಶ್ವಾಸಿಗಳಿಗೆ ಸೇವೆಮಾಡಲು ಅಥವಾ ಆಶೀರ್ವದಿಸಲು ನೀವು ಅವಕಾಶವನ್ನು ತೆಗೆದುಕೊಂಡಿದ್ದೀರಾ?

ನೀವು ಪ್ರಾರ್ಥನೆಗೆ ನಿರ್ಧಿಷ್ಟವಾದ ಉತ್ತರಗಳನ್ನು ನೋಡಿದ್ದೀರಾ?


ವಾರದಲ್ಲಿ ಓದಬೇಕಾದವುಗಳನ್ನು ಪೂರ್ತಿಗೊಳಿಸಿದ್ದೀರಾ?

# ಅಧಿವೇಶನ 02

ಈ ಅಧಿವೇಶನದಲ್ಲಿ, ನಿಮ್ಮ ಗುಂಪು ದೇವರ ರಾಜ್ಯದಲ್ಲಿ ಉತ್ಪನ್ನರು ಮತ್ತು ಗ್ರಾಹಕರ ನಡುವಿನ ವ್ಯತ್ಯಾಸವನ್ನು ಕಲಿಯುತ್ತದೆ. ಶಿಷ್ಯರನ್ನು ಹೆಚ್ಚಿಸಲು ನೀವು ಇನ್ನು ಎರಡು ಸರಳವಾದ ಸಾಧನಗಳನ್ನು ಕುರಿತು ಸಹ ಕಲಿಯುವಿರಿ ಮತ್ತು ಅಭ್ಯಾಸ ಮಾಡುವಿರಿ.

## ಪ್ರಾರ್ಥನೆಯ ಕಾಲಚಕ್ರ

ಪ್ರಾರ್ಥನೆಯ ಕಾಲಚಕ್ರವು ಪ್ರಾರ್ಥನೆಯನ್ನು ಅಭ್ಯಾಸ ಮಾಡಲು ಸರಳ ಸಾಧವಾಗಿದೆ. ನೀವು ಇದನ್ನು ನಿಮಷ್ಟಕ್ಕೆ ಉಪಯೋಗಿಸಬಹುದು ಮತ್ತು ನೀವು ಇತರೆ ಹಿಂಬಾಲಕರೊಂದಿಗೆ ಹಂಚಿಕೊಳ್ಳಬಹುದು. ಈ ಪ್ರಾರ್ಥನೆಯ ಕಾಲಚಕ್ರವು – ಪ್ರತಿಯೊಂದು 5 ನಿಮಿಷದ – ಕೇವಲ 12 ಸರಳ ಹೆಜ್ಜೆಗಳಲ್ಲಿ ಪ್ರಾರ್ಥಿಸಲು ಸತ್ಯವೇದವು ಬೋಧಿಸುವ ಹನ್ನೆರಡು ರೀತಿಗಳ ಮೂಲಕ ನಮ್ಮನ್ನು ಮಾರ್ಗದರ್ಶಿಸುತ್ತದೆ.




**ಸ್ತುತಿಸಿರಿ:** ಕರ್ತನನ್ನು ಸ್ತುತಿಸುತ್ತಾ ನಿಮ್ಮ ಪ್ರಾರ್ಥನೆಯ ಸಮಯವನ್ನು ಆರಂಭಿಸಿ. ಈಗಾಗಲೇ ನಿಮ್ಮ ಮನಸ್ಸಿನಲ್ಲಿರುವ ಸಂಗತಿಗಳಿಗಾಗಿ ಆತನನ್ನು ಸ್ತುತಿಸಿರಿ. ಕಳೆದ ವಾರ ಆತನು ನಿಮ್ಮ ಜೀವನದಲ್ಲಿ ಮಾಡಿದ ಒಂದು ವಿಶೇಷವಾದ ಕಾರ್ಯಕ್ಕಾಗಿ ಆತನನ್ನು ಸ್ತುತಿಸಿರಿ. ನಿಮ್ಮ ಕುಟುಂಬದವರಿಗೆ ಆತನು ಒಳ್ಳೆಯವನಾಗಿರುವದಕ್ಕಾಗಿ ಆತನನ್ನು ಸ್ತುತಿಸಿರಿ.

**ಕಾದಿರ್ರಿ:** ಕರ್ತನ ಮೇಲೆ ಆತುಕೊಂಡು ಕಾದಿರುತ್ತಾ ಸಮಯವನ್ನು ಕಳೆಯಿರಿ. ಮೌನವಾಗಿರ್ರಿ ಮತ್ತು ನಿಮಗಾಗಿ ಒಟ್ಟಾಗಿ ಪ್ರತಿಫಲಗಳನ್ನು ಆತನು ಕೊಡಲಿ.

**ಅರಿಕೆ ಮಾಡಿರಿ:** ಆತನನ್ನು ಮೆಚ್ಚಿಸದೆ ಇರುವ ಯಾವುದಾದರೂ ಸಂಗತಿಯು ನಿಮ್ಮ ಜೀವನದಲ್ಲಿ ಇದ್ದರೆ ಅದನ್ನು ತೋರಿಸಲು

ಪವಿತ್ರಾತ್ಮನನ್ನು ಬೇಡಿಕೊಳ್ಳಿರಿ. ನೀವು ಇನ್ನೂ ಅರಿಕೆಯ ಪ್ರಾರ್ಥನೆಯನ್ನು ಮಾಡದೆ ಇರುವಂತ ತಪ್ಪಾದ ನಡತೆಗಳನ್ನು ಹಾಗೂ ನಿರ್ಧಿಷ್ಟವಾದ ಕ್ರಿಯೆಗಳನ್ನು ತೋರಿಸಲು ಆತನನ್ನು ಬೇಡಿಕೊಳ್ಳಿರಿ. ಈಗ ಕರ್ತನಿಗೆ ಅರಿಕೆ ಮಾಡಿರಿ, ಹೀಗೆ ನೀವು ಶುದ್ಧರಾಗಬಹುದು.

**ವಾಕ್ಯವನ್ನು ಓದಿರಿ:** ಕೀರ್ತನೆಗಳು, ಪ್ರವಾದನೆಗಳು ಮತ್ತು ಹೊಸ ಒಡಂಬಡಿಕೆಯಲ್ಲಿರುವ ಪ್ರಾರ್ಥನೆಯ ವಾಕ್ಯಭಾಗಗಳನ್ನು ಓದುತ್ತಾ ಸಮಯವನ್ನು ಕಳೆಯಿರಿ.

**ಬೇಡಿಕೊಳ್ಳಿರಿ:** ನಿಮ್ಮ ಪರವಾಗಿ ಮನವಿಗಳನ್ನು ಮಾಡಿರಿ.

**ವಿಜ್ಞಾಪಣೆ:** ಇತರರ ಪರವಾಗಿ ಮನವಿಗಳನ್ನು ಮಾಡಿರಿ.

**ವಾಕ್ಯದಿಂದ ಪ್ರಾರ್ಥಿಸಿ:** ನಿರ್ಧಿಷ್ಟ ವಾಕ್ಯಭಾಗಗಳಿಂದ ಪ್ರಾರ್ಥಿಸಿ. ವಾಕ್ಯದ ಪ್ರಾರ್ಥನೆಗಳು ಹಾಗೂ ಅನೇಕ ಕೀರ್ತನೆಗಳು ಈ ಉದ್ದೇಶಕ್ಕಾಗಿ ಅವರನ್ನು ಉತ್ತಮವಾಗಿ ನಡೆಸುತ್ತವೆ.

**ಕೃತಜ್ಞತೆ ಸಲ್ಲಿಸಿರಿ:** ನಿಮ್ಮ ಜೀವನದಲ್ಲಿರುವ ಸಂಗತಿಗಳಿಗಾಗಿ, ನಿಮ್ಮ ಕುಟುಂಬದ ಪರವಾಗಿ ಮತ್ತು ನಿಮ್ಮ ಸಭೆಯ ಪರವಾಗಿ ದೇವರಿಗೆ ಕೃತಜ್ಞತೆ ಸಲ್ಲಿಸಿರಿ.

**ಹಾಡಿರಿ:** ಸ್ತುತಿಯ ಅಥವಾ ಆರಾಧನೆಯ ಅಥವಾ ಬೇರೆ ಸ್ತುತಿಗೀತೆ ಅಥವಾ ಆತ್ಮೀಕ ಹಾಡುಗಳನ್ನು ಹಾಡಿರಿ.

**ಧ್ಯಾನಮಾಡಿರಿ:** ದೇವರು ನಿಮ್ಮೊಂದಿಗೆ ಮಾತನಾಡುವಂತೆ ಬೇಡಿಕೊಳ್ಳಿರಿ. ಆತನು ನಿಮಗೆ ಕೊಡುವ ಅನಿಸಿಕೆಗಳನ್ನು ಬರೆದುಕೊಳ್ಳಲು ಪೆನ್ ಮತ್ತು ಹಾಳೆಯನ್ನು ಸಿದ್ಧವಾಗಿ ಇಟ್ಟುಕೊಳ್ಳಿರಿ.

**ಕೇಳಿರಿ:** ನೀವು ಓದಿದ ಸಂಗತಿಗಳನ್ನು, ಪ್ರಾರ್ಥಿಸಿದ ಸಂಗತಿಗಳನ್ನು ಮತ್ತು ಹಾಡಿದ ಸಂಗತಿಗಳನ್ನು ವಿಲೀನಗೊಳಿಸಿ ಮತ್ತು ನಿಮ್ಮೊಂದಿಗೆ ಮಾತನಾಡಲು ಕರ್ತನು ಅವುಗಳನ್ನು ಒಟ್ಟಾಗಿ ಹೇಗೆ ತರುವನೆಂದು ನೋಡಲು ಸಮಯವನ್ನು ಕಳೆಯಿರಿ.

**ಸ್ತುತಿಸಿರಿ:** ಆತನೊಂದಿಗೆ ನೀವು ಕಳೆದ ಸಮಯಕ್ಕಾಗಿ ಮತ್ತು ಆತನು ನಿಮಗೆ ಕೊಟ್ಟ ಆಲೋಚನೆಗಳಿಗಾಗಿ ಆತನನ್ನು ಸ್ತುತಿಸಿರಿ. ಆತನ ಮಹಿಮೆಯ ಗುಣಲಕ್ಷಣಗಳಿಗಾಗಿ ಆತನನ್ನು ಸ್ತುತಿಸಿರಿ.

**ಚಟುವಟಿಕೆ** [60 ನಿಮಿಷ] – ಪ್ರಾರ್ಥನೆಯ ಚಕ್ರದಲ್ಲಿರುವ ಚಟುವಟಿಕೆಗಳನ್ನು ವೈಯಕ್ತಿಕವಾಗಿ ಕಾರ್ಯಮಾಡುತ್ತಾ ಮುಂದಿನ 60 ನಿಮಿಷಗಳನ್ನು ಪ್ರಾರ್ಥನೆಯಲ್ಲಿ ಕಳೆಯಿರಿ. ಗುಂಪಿನವರು ತಿರಿಗಿ ಸಂಪರ್ಕದಲ್ಲಿರಲು ಸಮಯವನ್ನು ಗೊತ್ತುಪಡಿಸಿರಿ. ಪ್ರಾರ್ಥಿಸುವದಕ್ಕಾಗಿ ಪ್ರತಿಯೊಬ್ಬರು ಮೌನವಾದ ಸ್ಥಳವನ್ನು ಕಂಡುಕೊಳ್ಳಲು ಮತ್ತು ತಮ್ಮ ಗುಂಪಿಗೆ ಹಿಂದಿರುಗಲು ಇನ್ನು ಸ್ವಲ್ಪ ನಿಮಿಷಗಳನ್ನು ಸೇರಿಸಲು ಖಚಿತಪಡಿಸಿಕೊಳ್ಳಿರಿ.

## 100 ಮಂದಿಯ ಪಟ್ಟಿ

ನಿಮ್ಮ ಸಂಬಂಧಿಕರ ಕಡೆಗೆ ನಿಮಗಿರುವ ಒಂದು ಜವಾಬ್ಧಾರಿಕೆಯನ್ನು ಕುರಿತು ಎಂದಾರು ಆಲೋಚಿಸಿದ್ದೀರಾ? 100 ಮಂದಿಯ ಪಟ್ಟಿಯು ನಿಮ್ಮ ಸಂಬಂಧಿಕರ ಕಡೆಗೆ ನೀವು ಹೆಚ್ಚು ಜವಾಬ್ಧಾರರಾಗಿರಲು ನಿಮಗೆ ಸಹಾಯ ಮಾಡುವ ಒಂದು ಸರಳ ಸಾಧನವಾಗಿದೆ.

ದೇವರು ಈಗಾಗಲೇ ನಮಗೆ ಸಂಬಂಧಗಳನ್ನು ಕೊಟ್ಟಿದ್ದಾನೆ, ನಾವು “ಹೋಗಿ ಶಿಷ್ಯರನ್ನಾಗಿ ಮಾಡಬೇಕಾಗಿದೆ.” ಇವರು ನಮ್ಮ ಕುಟುಂಬ, ಸ್ನೇಹಿತರು, ನೆರೆಯವರು, ಜೊತೆಕೆಲಸಗಾರರು ಮತ್ತು ಸಹಪಾಠಿಗಳು – ನಮ್ಮ ಜೀವಿತ ಕಾಲದಲ್ಲಿ ನಾವು ತಿಳಿದಿರುವ ಎಲ್ಲಾ ಜನರು ಅಥವಾ ನಾವು ಈಗ ತಾನೇ ಸಂಧಿಸಿರುವ ಜನರು ಆಗಿದ್ದಾರೆ. ಈಗಾಗಲೇ ನಮ್ಮ ಜೀವಿತದಲ್ಲಿ ದೇವರು ಇಟ್ಟಿರುವ ಜನರೊಂದಿಗೆ

ನಂಬಿಗಸ್ತರಾಗಿರುವದು ಹೆಚ್ಚು ಶಿಷ್ಯರನ್ನಾಗಿ ಮಾಡಲು ಅತಿದೊಡ್ಡ ಹೆಜ್ಜೆಯಾಗಿದೆ. ಮತ್ತು ಇದು ಪಟ್ಟಿಮಾಡುವ ಸರಳ ಹೆಜ್ಜೆಯಿಂದ ಆರಂಭವಾಗುತ್ತದೆ.

**ಚಟುವಟಿಕೆ** [**30** ನಿಮಿಷಗಳು] **–** ಈ ಕೆಳಗೆ ಕೊಡಲ್ಪಟ್ಟಿರುವ ಫಾರಂ ಉಪಯೋಗಿಸಿ ತಮ್ಮ ಸ್ವಂತ ಸಂಬಂಧಿಕರ ಪಟ್ಟಿಯನ್ನು ಮಾಡಲು ನಿಮ್ಮ ಗುಂಪಿನಲ್ಲಿರುವ ಪ್ರತಿಯೊಬ್ಬರು ಮುಂದಿನ **30** ನಿಮಿಷಗಳನ್ನು ತೆಗೆದುಕೊಳ್ಳಲಿ. ಪ್ರತಿಯೊಂದು ಸಾಲಿನಲ್ಲಿ ಹೆಸರನ್ನು ಬರೆಯಿರಿ ಮತ್ತು ಆ ವ್ಯಕ್ತಿಯ ಆತ್ಮೀಕ ಸ್ಥಿತಿಯನ್ನು **"ಶಿಷ್ಯನು" [**ಈಗಾಗಲೇ ಯೇಸುವಿನ ಹಿಂಬಾಲಕನೆಂದು ನೀವು ನಂಬಿರುವ ವ್ಯಕ್ತಿ]**, "ಅವಿಶ್ವಾಸಿ" [**ಈಗಾಗಲೇ ಯೇಸುವಿನ ಹಿಂಬಾಲಕನಲ್ಲವೆಂದು ನೀವು ನಂಬಿರುವ ವ್ಯಕ್ತಿ] ಅಥವಾ **"ತಿಳಿಯದವನು"** ಎಂದು ಗುರುತಿಸಿ.

ಯಾರಾದರೂ ತಮ್ಮ ಪಟ್ಟಿಯನ್ನು ಪೂರ್ಣಗೊಳಿಸಲು ಸಮಯ ಈಗ ಸಾಕಾಗದಿದ್ದರೆ, ಅವರು ಬೇರೆ ಸಮಯದಲ್ಲಿ ಪೂರ್ಣಗೊಳಿಸಬಹುದು.

**ನೆನಪಿಡಿ** – ನಿಮ್ಮ **100** ಮಂದಿಯ ಪಟ್ಟಿಯಲ್ಲಿರುವ ಜನರನ್ನು ನೀವು ಹೇಗೆ ಸಂಧಿಸುತ್ತೀರೆಂದು ತಿಳಿದಿರಬೇಕು ಮತ್ತು ಅವರೊಂದಿಗೆ ನೀವು ಪ್ರಸ್ತುತವಾಗಿ ಅಥವಾ ಬಹುಕಾಲದ ಸಂಪರ್ಕವಿರಬೇಕು.

## 100 ಮಂದಿಯ ಪಟ್ಟಿ

1. ಜಾನ್ ಡಿಯೋ ☐ ಶಿಷ್ಯನು ☐ ಅವಿಶ್ವಾಸಿ ■ ತಿಳಿಯದವರು

1. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
2. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
3. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
4. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
5. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
6. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
7. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
8. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
9. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
10. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
11. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
12. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
13. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
14. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
15. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
16. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
17. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
18. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
19. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
20. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
21. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
22. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
23. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
24. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
25. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
26. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
27. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
28. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
29. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
30. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು
31. ____________________ ☐ ಶಿಷ್ಯನು ☐ ಅವಿಶ್ವಾಸಿ ☐ ತಿಳಿಯದವರು

| | | | |
|---|---|---|---|
| 32. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 33. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 34. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 35. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 36. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 37. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 38. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 39. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 40. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 41. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 42. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 43. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 44. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 45. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 46. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 47. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 48. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 49. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 50. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 51. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 52. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 53. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 54. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 55. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 56. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 57. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 58. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 59. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 60. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 61. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 62. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 63. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 64. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 65. ____________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |

| | | | |
|---|---|---|---|
| 66. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 67. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 68. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 69. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 70. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 71. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 72. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 73. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 74. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 75. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 76. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 77. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 78. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 79. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 80. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 81. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 82. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 83. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 84. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 85. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 86. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 87. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 88. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 89. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 90. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 91. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 92. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 93. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 94. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 95. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 96. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 97. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 98. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 99. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |
| 100. ________________ | ☐ ಶಿಷ್ಯನು | ☐ ಅವಿಶ್ವಾಸಿ | ☐ ತಿಳಿಯದವರು |

## ಅಧಿವೇಶನ 03

ಈ ಅಧಿವೇಶನದಲ್ಲಿ ದೇವರ ಆತ್ಮೀಕ ಆರ್ಥಿಕತೆ ಹೇಗೆ ಕಾರ್ಯ ಮಾಡುತ್ತದೆ ಮತ್ತು ತಮಗೆ ಈಗಾಗಲೇ ಕೊಡಲ್ಪಟ್ಟಿರುವವುಗಳಿಂದ ನಂಬಿಗಸ್ತರಾಗಿರುವವರಲ್ಲಿ ದೇವರು ಹೇಗೆ ಹೆಚ್ಚಾಗಿ ತೊಡಗಿಸಿಕೊಳ್ಳುವನು ಎಂದು ನಾವು ಕಲಿತುಕೊಳ್ಳುತ್ತೇವೆ. ಶಿಷ್ಯರನ್ನು ಮಾಡಲು ಇನ್ನು ಎರಡು ಸಾಧನಗಳನ್ನು ಕುರಿತು ಕಲಿಯುತ್ತೇವೆ - ದೇವರ ಕಥೆಯನ್ನು ಹಂಚಿಕೊಳ್ಳುವದು, ಸೃಷ್ಟಿಯಿಂದ ನ್ಯಾಯತೀರ್ಪಿನವರೆಗೆ ಮತ್ತು ದೀಕ್ಷಾಸ್ನಾನ.

### ದೇವರ ಕಥೆ [ಸುವಾರ್ತೆ]

ಯೇಸು ಹೇಳಿದ್ದು – "ಪವಿತ್ರಾತ್ಮನು ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯ ವರೆಗೂ ನನಗೆ ಸಾಕ್ಷಿಗಳಾಗಿರಬೇಕು."

ಯೇಸು ತನ್ನ ಹಿಂಬಾಲಕರನ್ನು ಹೆಚ್ಚಾಗಿ ನಂಬಿ, ತನ್ನ ಕಥೆಯನ್ನು ಹೇಳಲು ಅವರಲ್ಲಿ ಭರವಸೆಯಿಟ್ಟನು. ನಂತರ ಆತನು ಅವರನ್ನು ಹಾಗೆ ಮಾಡಲು ಲೋಕದಲ್ಲೆಡೆ ಕಳುಹಿಸಿದನು. ಈಗ ಆತನು ನಮ್ಮನ್ನು ಕಳುಹಿಸುತ್ತಿದ್ದಾನೆ.

ದೇವರ ಕಥೆಯನ್ನು [ಸುವಾರ್ತೆ ಎಂದು ಸಹ ಕರೆಯುವದನ್ನು] ಹೇಳಲು "ಉತ್ತಮವಾದ ಮಾರ್ಗವಿಲ್ಲ", ಯಾಕೆಂದರೆ ನೀವು ಯಾರೊಂದಿಗೆ ಹಂಚಿಕೊಳ್ಳುತ್ತಿದ್ದೀರಿ ಎಂಬುದರ ಮೇಲೆ ಉತ್ತಮವಾದ ಮಾರ್ಗವು ಆಧಾರಗೊಳ್ಳುತ್ತದೆ. ವಾಕ್ಯಕ್ಕೆ ಸರಿಯಾಗಿರುವ ಮತ್ತು ಅವರು ಹಂಚಿಕೊಳ್ಳುತ್ತಿರುವ ಜನರಿಗೆ ಸಂಬಂಧಿಸುವ ರೀತಿಯಲ್ಲಿ ದೇವರ ಕಥೆಯನ್ನು ಹೇಳಲು ಪ್ರತಿಯೊಬ್ಬ ಶಿಷ್ಯನು ಕಲಿಯಬೇಕಾಗಿದೆ.

### ದೇವರ ಕಥೆ (ಸೃಷ್ಟಿಯಿಂದ ನ್ಯಾಯತೀರ್ಪಿನ ವರೆಗೆ)

ದೇವರ ಶುಭವಾರ್ತೆಯನ್ನು ಸಾರಲು ಒಂದು ಮಾರ್ಗವೆಂದರೆ ದೇವರ ಕಥೆಯನ್ನು ಸೃಷ್ಟಿಯಿಂದ ನ್ಯಾಯತೀರ್ಪಿನ ವರೆಗೆ ಹೇಳುವದು – ಅಂದರೆ ಮಾನವ ಕುಲದ ಆರಂಭದಿಂದ ಈ ಯುಗದ ಸಮಾಪ್ತಿಯ ವರೆಗೆ.

ನಾವು ಈ ರೀತಿಯಲ್ಲಿ ದೇವರ ಕಥೆಯನ್ನು ಹೇಳಿದಾಗ, ನಾವು ಅದನ್ನು ಉದ್ದವಾಗಿ ಅಥವಾ ಚಿಕ್ಕದಾಗಿ, ವಿವರವಾಗಿ ಅಥವಾ ಕೇವಲ ಹೊರನೋಟವನ್ನು ಹೇಳಬಹುದು, ಆದರೆ ಯಾವಾಗಲೂ ಕೇಳುವವರ ಸಂಸ್ಕೃತಿಗೆ ಜೋಡಣೆಯಾಗಿರಬೇಕು.

ವಿವಿಧ ಸಂಸ್ಕೃತಿಗಳು ಮತ್ತು ಲೋಕದ ದೃಷ್ಟಿಕೋನಗಳಿಂದ ಆತನ ಕಥೆಯನ್ನು ಹೇಳಲು ಸಹಾಯವಾಗುವದಕ್ಕಾಗಿ, ಕಲಿಯಲು ಮತ್ತು ಬೋಧಿಸಲು ಸುಲಭವಾಗಲು ನೀವು ಕೈ ಚಲನೆಗಳನ್ನು ಸಹ ಉಪಯೋಗಿಸಬಹುದು.

ದೇವರ ಕಥೆಯ ಶುಭವಾರ್ತೆಯು ಇಲ್ಲಿ ಕೊಡಲ್ಪಟ್ಟಿದೆ –

"ಆದಿಯಲ್ಲಿ ದೇವರು ಇಡೀ ಲೋಕವನ್ನು ಮತ್ತು ಅದರಲ್ಲಿರುವ ಸಮಸ್ತವನ್ನು ಉಂಟುಮಾಡಿದನು. ಆತನು ಮೊದಲ ಪುರುಷನು ಮತ್ತು ಮೊದಲ ಸ್ತ್ರೀಯನ್ನು ಉಂಟುಮಾಡಿದನು. ಆತನು ಅವರನ್ನು ಸುಂದರವಾದ ತೋಟದಲ್ಲಿ ಇಟ್ಟನು. ಆತನು ಅವರನ್ನು ತನ್ನ ಕುಟುಂಬದ ಭಾಗವಾಗಿ ಮಾಡಿದನು ಮತ್ತು ಅವರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದ್ದನು. ಆತನು ಅವರನ್ನು ಸದಾಕಾಲ ಇರುವದಕ್ಕಾಗಿ ಉಂಟುಮಾಡಿದನು. ಮರಣ ಎಂಬ ಸಂಗತಿಯು ಇರಲೇ ಇಲ್ಲ."

“ಇಂಥ ಪರಿಪೂರ್ಣ ಸ್ಥಳದಲ್ಲಿ ಮನುಷ್ಯನು ದೇವರಿಗೆ ವಿರುದ್ಧವಾಗಿ ತಿರುಗಿಬಿದ್ದು ಲೋಕದೊಳಕ್ಕೆ ಪಾಪ ಮತ್ತು ಸಂಕಷ್ಟವನ್ನು ತಂದನು. ದೇವರು ಮನುಷ್ಯನನ್ನು ತೋಟದಿಂದ ತೆಗೆದುಹಾಕಿದನು. ಮನುಷ್ಯ ಮತ್ತು ದೇವರ ನಡುವಿನ ಸಂಬಂಧವು ಮುರಿದುಹೋಯಿತು. ಈಗ ಮನುಷ್ಯನು ಮರಣವನ್ನು ಎದುರಿಸಬೇಕಾಗಿದೆ. ”

“ನೂರಾರು ವರುಷಗಳಿಂದ, ದೇವರು ಈ ಲೋಕಕ್ಕೆ ದೂತರನ್ನು ಕಳುಹಿಸುತ್ತಿದ್ದನು. ಅವರು ಮನುಷ್ಯರಿಗೆ ತಮ್ಮ ಪಾಪವನ್ನು ಕುರಿತು ನೆನಪಿಸುತ್ತಿದ್ದರು, ಆದರೆ ದೇವರ ನಂಬಿಗಸ್ತಿಕೆ ಮತ್ತು ಲೋಕಕ್ಕೆ ರಕ್ಷಕನನ್ನು ಕಳುಹಿಸಿಕೊಡುವ ವಾಗ್ದಾನವನ್ನು ಕುರಿತು ಹೇಳಿದರು. ಈ ರಕ್ಷಕನು ದೇವರು ಮತ್ತು ಮನುಷ್ಯನ ನಡುವಿನ ನಿಕಟ ಸಂಬಂಧವನ್ನು ಪುನಃಸ್ಥಾಪಿಸುವನು. ರಕ್ಷಕನು ಮನುಷ್ಯನನ್ನು ಮರಣದಿಂದ ಪಾರುಮಾಡುವನು. ಈ ರಕ್ಷಕನು ನಿತ್ಯಜೀವವನ್ನು ಕೊಡುವನು ಮತ್ತು ಮನುಷ್ಯನೊಂದಿಗೆ ಸದಾಕಾಲ ಇರುವನು.”

“ದೇವರು ನಮ್ಮನ್ನು ಎಷ್ಟೋ ಹೆಚ್ಚಾಗಿ ಪ್ರೀತಿಸಿ, ತಕ್ಕ ಸಮಯದಲ್ಲಿ ತನ್ನ ಮಗನನ್ನು ಈ ಲೋಕದ ರಕ್ಷಕನನ್ನಾಗಿ ಕಳುಹಿಸಿದನು.”

“ಯೇಸು ದೇವರ ಕುಮಾರನಾಗಿದ್ದನು. ಆತನು ಕನ್ನಿಕೆಯ ಮೂಲಕ ಈ ಲೋಕದೊಳಗೆ ಜನಿಸಿದನು. ಆತನು ಪರಿಪೂರ್ಣವಾದ ಜೀವನವನ್ನು ನಡೆಸಿದನು. ಆತನು ಎಂದಿಗೂ ಪಾಪಮಾಡಲಿಲ್ಲ. ಯೇಸು ದೇವರನ್ನು ಕುರಿತಾಗಿ ಜನರಿಗೆ ಬೋಧಿಸಿದನು. ಆತನು ತನ್ನ ದೊಡ್ಡ ಬಲದಿಂದ ಅನೇಕ ಅದ್ಭುಕಾರ್ಯಗಳನ್ನು ನಡೆಸಿದನು. ಆತನು ಅನೇಕ ದೆವ್ವಗಳನ್ನು ಓಡಿಸಿದನು. ಅನೇಕ ಜನರನ್ನು ಗುಣಪಡಿಸಿದನು. ಕುರುಡರನ್ನು ನೋಡುವಂತೆ ಮಾಡಿದನು. ಆತನು ಕಿವುಡರನ್ನು ಕೇಳುವಂತೆ ಮಾಡಿದನು. ಆತನು ಕುಂಟರನ್ನು ನಡೆಯುವಂತೆ ಮಾಡಿದನು. ಯೇಸು ಸತ್ತವರನ್ನು ಸಹ ಎಬ್ಬಿಸಿದನು.”

“ಅನೇಕ ಧಾರ್ಮಿಕ ನಾಯಕರು ಹೆದರಿಕೊಂಡರು ಮತ್ತು ಯೇಸುವನ್ನು ಕುರಿತಾಗಿ ಹೊಟ್ಟೆಕಿಚ್ಚುಪಟ್ಟರು. ಅವರು ಆತನನ್ನು ಕೊಲ್ಲಬೇಕೆಂದು ಬಯಸಿದರು. ಆತನು ಎಂದಿಗೂ ಪಾಪ ಮಾಡದೆ ಇದ್ದದರಿಂದ, ಯೇಸು ಸಾಯಬೇಕಾಗಿರಲಿಲ್ಲ. ಆದರೆ ನಮ್ಮೆಲ್ಲರಿಗಾಗಿ ಬಲಿದಾನವಾಗಿ ಸಾಯಲು ಆತನು ಆಯ್ಕೆಮಾಡಿಕೊಂಡನು. ಆತನ ನೋವುಕರ ಮರಣವು ಮನುಷ್ಯನ ಪಾಪಗಳನ್ನು ಮುಚ್ಚಿಹಾಕಿತು. ಇದಾದ ನಂತರ ಯೇಸುವನ್ನು ಸಮಾಧಿಯಲ್ಲಿ ಹೂಣಿಡಲಾಯಿತು.”

“ಯೇಸುವಿನ ಬಲಿದಾನವನ್ನು ದೇವರು ನೋಡಿ ಅದನ್ನು ಅಂಗೀಕರಿಸಿದನು. ಯೇಸುವನ್ನು ಮೂರನೆಯ ದಿನದಲ್ಲಿ ಮರಣದಿಂದ ಎಬ್ಬಿಸುವದರ ಮೂಲಕ ತನ್ನ ಅಂಗೀಕಾರವನ್ನು ತೋರಿಸಿದನು.”

ದೇವರು ಯೇಸುವನ್ನು ಮರಣದಿಂದ ಎಬ್ಬಿಸಿದನೆಂದು ನಮ್ಮ ಹೃದಯಗಳಲ್ಲಿ ನಂಬಿ ಆತನನ್ನು ನಮ್ಮ ಒಡೆಯನು, ನಮ್ಮ ಅಧಿಪತಿಯು ಮತ್ತು ಅರಸನೆಂದು ಅರಿಕೆ ಮಾಡಿದರೆ, ನಾವು ರಕ್ಷಣೆ ಹೊಂದುತ್ತೇವೆ. ವಿಶ್ವಾಸಿಗಳಾಗಿ ನಾವು ಪಾಪದ ಜೀವಿತದಿಂದ ತಿರುಗಿಕೊಂಡು ಯೇಸುವಿನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿಕೊಂಡು, ನೀರಿನಲ್ಲಿ ಹೂಣಲ್ಪಟ್ಟು, ನಮ್ಮ ಹಳೆಯ ಜೀವಿತಗಳಿಗೆ ಸತ್ತು ಮತ್ತು ಯೇಸುವನ್ನು ಮರಣದಿಂದ ಎಬ್ಬಿಸಿದಂತೆಯೇ ನೀರಿನಿಂದ ಎಬ್ಬಿಸಲ್ಪಟ್ಟು, ಆತನನ್ನು ಹಿಂಬಾಲಿಸುತ್ತಾ ಹೊಸ ಜೀವನವನ್ನು ನಡೆಸಬೇಕು. ದೇವರು ನಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸಿ, ದೇವರನ್ನು ಹಿಂಬಾಲಿಸಲು ಮತ್ತು ತಿರಿಗಿ ನಮ್ಮನ್ನು ಆತನ ಕುಟುಂಬಕ್ಕೆ ಸೇರಿಸುವದಕ್ಕಾಗಿ ನಮ್ಮೊಳಗೆ ವಾಸಿಸಲು ಪವಿತ್ರಾತ್ಮನನ್ನು ಕಳುಹಿಸುವನು.

“ಯೇಸು ಮರಣದಿಂದ ಎದ್ದ ನಂತರ ಆತನು ಭೂಮಿಯ ಮೇಲೆ ನಾಲ್ವತ್ತು ದಿವಸಗಳನ್ನು ಕಳೆದನು. ಎಲ್ಲಾ ಕಡೆಗಳಲ್ಲಿ ಹೋಗಿ ಆತನ ರಕ್ಷಣೆಯ ಸುವಾರ್ತೆಯನ್ನು ಲೋಕದೆಲ್ಲೆಡೆ ಪ್ರತಿಯೊಬ್ಬರಿಗೂ ತಿಳಿಸಲು ಯೇಸು ತನ್ನ ಹಿಂಬಾಲಕರಿಗೆ ಬೋಧಿಸಿದನು.”

**“ಯೇಸು ಹೇಳಿದ್ದು** - ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ, ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ.

ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ." ಅವರು ನೋಡುತ್ತಿರುವಾಗಲೇ ಯೇಸುವು ಪರಲೋಕಕ್ಕೆ ಒಯ್ಯಲ್ಪಟ್ಟನು.

"ಒಂದು ದಿವಸ ಯೇಸು ಹೋದ ರೀತಿಯಲ್ಲಿಯೇ ತಿರಿಗಿ ಬರುವನು. ಆತನನ್ನು ಪ್ರೀತಿಸಿ ವಿಧೇಯರಾಗದೆ ಇರುವವರಿಗೆ ನಿತ್ಯಶಿಕ್ಷೆಯನ್ನು ಕೊಡುವನು. ಆತನನ್ನು ಪ್ರೀತಿಸಿ ವಿಧೇಯರಾದವರು ಸದಾಕಾಲದ ಬಹುಮಾನವನ್ನು ಹೊಂದಿಕೊಳ್ಳುವರು. ನಾವು ಆತನೊಂದಿಗೆ ಹೊಸ ಆಕಾಶ ಮತ್ತು ಹೊಸ ಭೂಮಿಯ ಮೇಲೆ ಸದಾಕಾಲ ಇರುವೆವು."

"ಯೇಸು ನನ್ನ ಪಾಪಗಳಿಗಾಗಿ ಮಾಡಿದ ಬಲಿದಾನವನ್ನು ನಾನು ನಂಬಿ ಸ್ವೀಕರಿಸಿದ್ದೇನೆ. ಆತನು ನನ್ನನ್ನು ಶುದ್ಧೀಕರಿಸಿ ದೇವರ ಕುಟುಂಬದ ಭಾಗವಾಗಿ ನನ್ನನ್ನು ಪುನಃಸ್ಥಾಪಿಸಿದನು. ಆತನು ನನ್ನನ್ನು ಪ್ರೀತಿಸುವನು ಮತ್ತು ನಾನು ಆತನನ್ನು ಪ್ರೀತಿಸುತ್ತೇನೆ ಮತ್ತು ಆತನ ರಾಜ್ಯದಲ್ಲಿ ಆತನೊಂದಿಗೆ ಸದಾಕಾಲ ವಾಸಿಸುತ್ತೇನೆ."

"ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನೀವು ಸಹ ಈ ವರವನ್ನು ಹೊಂದಿಕೊಳ್ಳಬೇಕೆಂದು ಬಯಸುತ್ತಾನೆ. ನೀವು ಈಗಲೇ ಹೀಗೆ ಮಾಡಲು ಬಯಸುವಿರಾ?"

**ಚಟುವಟಿಕೆ** [45 ನಿಮಿಷ] – ಇಬ್ಬರು ಅಥವಾ ಮೂರು ಮಂದಿಯ ಗುಂಪುಗಳಾಗಿ ವಿಂಗಡಿಸಿ ಮತ್ತು ದೇವರ ಕಥೆಯನ್ನು ಹೇಳುವದನ್ನು ಅಭ್ಯಾಸಮಾಡುತ್ತಾ ಮುಂದಿನ 45 ನಿಮಿಷಗಳನ್ನು ಕಳೆಯಿರಿ. "ಅವಿಶ್ವಾಸಿ ಅಥವಾ ತಿಳಿಯದವರು" ಎಂದು ನೀವು ಗುರುತಿಸಿದ 100 ಮಂದಿಯ ನಿಮ್ಮ ಪಟ್ಟಿಯಿಂದ 5 ಜನರನ್ನು ಆರಿಸಿಕೊಳ್ಳಿರಿ. ಈ ಐದು ಜನರಾಗಿ ನಟಿಸಲು ಯಾರನ್ನಾದರು ಆರಿಸಿಕೊಳ್ಳಿರಿ ಮತ್ತು ಆ ವ್ಯಕ್ತಿಗೆ ಅರ್ಥಕೊಡುವ ರೀತಿಯಲ್ಲಿ ದೇವರ ಕಥೆ ಹೇಳಲು ಅಭ್ಯಾಸ ಮಾಡಿರಿ.

ನೀವು ಸೃಷ್ಟಿಯಿಂದ ನ್ಯಾಯತೀರ್ಪಿನ ವರೆಗಿನ ಕಥೆಯನ್ನು ಉಪಯೋಗಿಸಬಹುದು ಅಥವಾ ನೀವು ಹಂಚಿಕೊಳ್ಳುತ್ತಿರುವವರಿಗೆ ಸಹಾಯಕರವೆಂದು ನೀವು ಆಲೋಚಿಸುವ ಬೇರೆ ರೀತಿಯನ್ನು ಉಪಯೋಗಿಸಿ. ನೀವು ಅಭ್ಯಾಸಮಾಡಿದ ನಂತರ ಮತ್ತೊಬ್ಬರಿಗೆ ಅವಕಾಶ ಕೊಡಿ. ಅವರ ಪಟ್ಟಿಯಿಂದ ಐದು ಜನರಲ್ಲಿ ಒಬ್ಬರೆಂದು ನಟಿಸಿರಿ. ನೀವು ಮುಗಿಸಿದ ನಂತರ, ದೇವರ ಕಥೆಯನ್ನು ಹಂಚಿಕೊಳ್ಳಲು ಸಿದ್ಧರಾಗಿರುವಿರಿ.

## ದೀಕ್ಷಾಸ್ನಾನ

ಯೇಸು ಹೇಳಿದ್ದು – "ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ."

ದೀಕ್ಷಾಸ್ನಾನ ಅಥವಾ ಬ್ಯಾಪ್ಟೈಸೋ ಎಂಬ ಮೂಲ ಗ್ರೀಕ್ ಭಾಷೆಯ ಅರ್ಥ ಮುಳುಗಿಸು ಎಂಬದೇ – ನೀವು ಬಟ್ಟೆಗೆ ಬಣ್ಣ ಹಾಕಿದಾಗ ಮತ್ತು ಬಣ್ಣದಲ್ಲಿ ನೆನೆಸಿದಾಗ ಅದು ಮಾರ್ಪಟ್ಟು ಹೊರಬರುತ್ತದೆ. ದೀಕ್ಷಾಸ್ನಾನವು ಯೇಸುವಿನ ಸ್ವರೂಪದಲ್ಲಿ ಮುಳುಗಿಸಲ್ಪಟ್ಟು, ದೇವರಿಗೆ ವಿಧೇಯರಾಗಿ ಮಾರ್ಪಟ್ಟಂತ ನಮ್ಮ ಹೊಸ ಜೀವನದ ಚಿತ್ರಣವಾಗಿದೆ. ಯೇಸು ನಮ್ಮ ಪಾಪಗಳಿಗಾಗಿ ಸತ್ತಂತೆಯೇ, ಇದು ಪಾಪಕ್ಕೆ ಸತ್ತ ನಮ್ಮ ಮರಣದ ಚಿತ್ರಣವಾಗಿದೆ; ಯೇಸು ಹೂಣಲ್ಪಟ್ಟಂತೆಯೇ ನಮ್ಮ ಹಳೆಯ ಜೀವಿತವನ್ನು ಹೂಣಿಡುವದು; ಯೇಸು ಪುನರುತ್ಥಾನವಾಗಿ ಇಂದು ಜೀವಿಸುತ್ತಿರುವಂತೆಯೇ, ಕ್ರಿಸ್ತನಲ್ಲಿರುವ ಹೊಸ ಜೀವನಕ್ಕೆ ಹೊಸ ಜನ್ಮವಾಗಿದೆ.

ನೀವು ಬೇರೊಬ್ಬರನ್ನು ಎಂದಿಗೂ ದೀಕ್ಷಾಸ್ನಾನ ಮಾಡಿಸದೆ ಇದ್ದರೆ, ಅದು ಬೆದರಿಸುವಂತೆ ಕಾಣುತ್ತದೆ, ಆದರೆ ಹಾಗೆ ಇರಬಾರದು. ಇಲ್ಲಿ ಕೆಲವು ಸರಳ ಹೆಜ್ಜೆಗಳು ಕೊಡಲ್ಪಟ್ಟಿವೆ:

1. ಹೊಸ ವಿಶ್ವಾಸಿಯನ್ನು ಮುಳುಗಿಸಲು ಸಾಕಷ್ಟು ಆಳವಿರುವ ನಿಂತಿರುವ ನೀರಿನ ಸ್ಥಳವನ್ನು ಕಂಡುಕೊಳ್ಳಿರಿ. ಇದು ಕೊಳ, ನದಿ, ಅಥವಾ ಸಾಗರವಾಗಿರಬಹುದು. ಇದು ಸ್ನಾನದ ತೊಟ್ಟಿ ಅಥವಾ ನೀರನ್ನು ಸಂಗ್ರಹಿಸಲು ಬೇರೊಂದು ರೀತಿ ಆಗಿರಬಹುದು.
2. ನಿಮ್ಮ ಕೈಗಳಿಂದ ಶಿಷ್ಯನ ಒಂದು ಕೈಯನ್ನು ಹಿಡಿದುಕೊಂಡು ಮತ್ತೊಂದು ಕೈಯಿಂದ ಅವರ ಬೆನ್ನಿಗೆ ಆಧಾರವಾಗಿ ಹಿಡಿದುಕೊಳ್ಳಿರಿ.
3. ಅವರ ತೀರ್ಮಾನವನ್ನು ತಿಳಿದುಕೊಳ್ಳಲು ಈ ಎರಡು ಪ್ರಶ್ನೆಗಳನ್ನು ಕೇಳಿರಿ.

   "ನೀವು ಯೇಸು ಕ್ರಿಸ್ತನನ್ನು ನಿಮ್ಮ ಒಡೆಯನು ಮತ್ತು ರಕ್ಷಕನೆಂದು ಅಂಗೀಕರಿಸಿದ್ದೀರಾ?"
   "ನಿಮ್ಮ ಉಳಿದ ಜೀವನದಲ್ಲಿ ಆತನು ನಿಮ್ಮ ಅರಸನೆಂದು ಆತನಿಗೆ ವಿಧೇಯರಾಗಿ ಸೇವೆ ಮಾಡುವಿರಾ?"

4. ಅವರು "ಹೌದು" ಎಂದು ಎರಡಕ್ಕೂ ಉತ್ತರಿಸಿದರೆ, ಈ ಕೆಳಗಿನಂತೆ ಹೇಳಿರಿ:

   "ನೀವು ಕರ್ತನಾದ ಯೇಸುವಿನಲ್ಲಿ ನಿಮ್ಮ ನಂಬಿಕೆಯನ್ನು ಅರಿಕೆ ಮಾಡಿದರಿಂದ, ನಾನು ಈಗ ನಿಮಗೆ ತಂದೆಯ ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುತ್ತೇನೆ"

5. ಅವರನ್ನು ನೀರಿನೊಳಗೆ ಸಂಪೂರ್ಣವಾಗಿ ಮುಳುಗಿಸಿ ತಿರಿಗಿ ಮೇಲಕ್ಕೆತ್ತಿರಿ.

**ಅಭಿನಂದನೆಗಳು!** ನೀವು ಹೊಸದಾಗಿ ಯೇಸುವನ್ನು ಹಿಂಬಾಲಿಸುವವರಿಗೆ ದೀಕ್ಷಾಸ್ನಾನ ಮಾಡಿಸಿದ್ದೀರಿ – ಅವನು ಪರಲೋಕದ ಹೊಸ ಪ್ರಜೆ – ಜೀವಿಸುವ ದೇವರ ಹೊಸ ಮಗನು ಆಗಿದ್ದಾನೆ. ಇದು ಸಂತೋಷಿಸುವ ಸಮಯವಾಗಿದೆ.

**ನೆನಪಿಸಿಕೊಳ್ಳಬೇಕಾದ ಮುಖ್ಯ ಸಂಗತಿ –** ಅಧಿವೇಶನ 4 ರಲ್ಲಿ ನಿಮ್ಮ ಗುಂಪು ಕರ್ತನ ಭೋಜನವನ್ನು ಆಚರಿಸುತ್ತದೆ. ಅಗತ್ಯವಾದ ವಸ್ತುಗಳನ್ನು [ರೊಟ್ಟಿ ಮತ್ತು ದ್ರಾಕ್ಷಾರಸ] ನೆನಪಿನಲ್ಲಿಟ್ಟುಕೊಳ್ಳಲು ಖಚಿತಪಡಿಸಿಕೊಳ್ಳಿರಿ.

## ಅಧಿವೇಶನ 04

ಈ ಅಧಿವೇಶನದಲ್ಲಿ, ಪ್ರತಿಯೊಬ್ಬ ಹಿಂಬಾಲಕನು ಹೆಚ್ಚಿಸುವದಕ್ಕಾಗಿ ದೇವರ ಯೋಜನೆ ಏನೆಂದು ನಾವು ಕಲಿತುಕೊಳ್ಳುತ್ತೇವೆ! ಕೆಲವೊಮ್ಮೆ ಹೆಚ್ಚು ನಂಬಿಗಸ್ತರಾಗಿರುವ ಹಿಂಬಾಲಕರು ಕಡೆಗಣಿಸಲ್ಪಟ್ಟ ಸ್ಥಳಗಳಿಂದ ಬರುವರೆಂದು ನಾವು ಅನ್ವೇಷಿಸುತ್ತೇವೆ. ನಮ್ಮ ಕಥೆಯನ್ನು ಆದಷ್ಟು ಸರಳವಾಗಿ ಹೇಳುವಂತೆಯೇ ಇತರರನ್ನು ದೇವರ ಕುಟುಂಬದೊಳಗೆ ಆಮಂತ್ರಿಸಲು ಮತ್ತೊಂದು ದೊಡ್ಡ ಸಾಧನವನ್ನು ಕುರಿತು ಕಲಿತುಕೊಳ್ಳುತ್ತೇವೆ.

### 3-ನಿಮಿಷದ ಸಾಕ್ಷಿ

ಯೇಸು ತನ್ನ ಹಿಂಬಾಲಕರಿಗೆ ಹೀಗೆ ಹೇಳಿದನು – "ನೀವು ಇವುಗಳಿಗೆ ಸಾಕ್ಷಿಗಳಾಗಿದ್ದೀರಿ."

ಯೇಸುವಿನ ಹಿಂಬಾಲಕರಾದ ನಾವು ಸಹ "ಸಾಕ್ಷಿಗಳಾಗಿದ್ದೇವೆ" – ನಮ್ಮ ಜೀವಿತದಲ್ಲಿ ಯೇಸು ಹೊಂದಿದ್ದ ಪ್ರಭಾವವನ್ನು ಕುರಿತು "ಸಾಕ್ಷಿ ಹೇಳುವದು." ದೇವರೊಂದಿಗಿನ ಸಂಬಂಧದ ನಿಮ್ಮ ಕಥೆಯನ್ನು ನಿಮ್ಮ ಸಾಕ್ಷಿಯೆಂದು ಕರೆಯಲಾಗುತ್ತದೆ. ಪ್ರತಿಯೊಬ್ಬರು ಕಥೆಯನ್ನು ಹೊಂದಿದ್ದಾರೆ. ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳುವದು ಅದನ್ನು ಅಭ್ಯಾಸ ಮಾಡಲು ಅವಕಾಶವಾಗಿದೆ.

ನಿಮ್ಮ ಕಥೆಗೆ ಆಕಾರ ಕೊಡಲು ಕೊನೆಯಿಲ್ಲದ ರೀತಿಗಳಿವೆ, ಆದರೆ ಉತ್ತಮವಾಗಿ ಕಾರ್ಯಮಾಡುವ ಕೆಲವು ರೀತಿಗಳು ಇಲ್ಲಿ ಕೊಡಲ್ಪಟ್ಟಿವೆ:

- **ಒಂದು ಸರಳ ಹೇಳಿಕೆ –** ನೀವು ಯಾಕೆ ಯೇಸುವನ್ನು ಹಿಂಬಾಲಿಸಲು ಆರಿಸಿಕೊಂಡಿದ್ದೀರೆಂದು ಒಂದು ಸರಳ ವಾಕ್ಯದಲ್ಲಿ ಹೇಳಬಹುದು. ಇದು ಅತಿ ಹೊಸ ವಿಶ್ವಾಸಿಗೆ ಚೆನ್ನಾಗಿ ಕಾರ್ಯಮಾಡುತ್ತದೆ.

- **ಮೊದಲು ಮತ್ತು ನಂತರ –** ನಿಮ್ಮ "ಮೊದಲಿನ" ಮತ್ತು "ನಂತರದ" ಕಥೆಯನ್ನು ಹಂಚಿಕೊಳ್ಳಬಹುದು – ನೀವು ಯೇಸುವನ್ನು ತಿಳಿದುಕೊಳ್ಳುವದಕ್ಕಿಂತ ಮೊದಲು ನಿಮ್ಮ ಜೀವಿತವು ಹೇಗಿತ್ತು ಮತ್ತು ಈಗ ನಿಮ್ಮ ಜೀವಿತವು ಹೇಗಿದೆ. ಇದು ಸರಳ ಮತ್ತು ಬಲವಾದದ್ದು.

- **ಕಥೆಯಿಂದ ಅಥವಾ ಕಥೆಯಿಲ್ಲದೆ –** ನಿಮ್ಮ ಕಥೆಯಿಂದ ಮತ್ತು ಕಥೆಯಿಲ್ಲದೆ ಹಂಚಿಕೊಳ್ಳಬಹುದು – "ಯೇಸುವಿನೊಂದಿಗೆ" ನಿಮ್ಮ ಜೀವಿತವು ಹೇಗಿದೆ ಮತ್ತು "ಆತನಿಲ್ಲದೆ" ಅದು ಹೇಗಿರುತ್ತದೆ. ನೀವು ಯೌವನ ಪ್ರಾಯದಲ್ಲಿ ನಂಬಿಕೆಗೆ ಬಂದಿದ್ದರೆ, ನಿಮ್ಮ ಕಥೆಯ ಈ ನಿರೂಪಣೆಯು ಚೆನ್ನಾಗಿ ಕೆಲಸಮಾಡುತ್ತದೆ.

ನಿಮ್ಮ ಕಥೆಯನ್ನು ಹಂಚಿಕೊಳ್ಳುವಾಗ, ಅದನ್ನು ಮೂರು ಭಾಗದ ಕಾರ್ಯವಿಧಾನವೆಂದು ಆಲೋಚಿಸುವದು ಸಹಾಯಕರವಾಗಿರುತ್ತದೆ:

- **ಅವರ ಕಥೆ –** ನೀವು ಮಾತನಾಡುತ್ತಿರುವ ವ್ಯಕ್ತಿಯೊಂದಿಗೆ ಅವರ ಆತ್ಮಿಕ ಪ್ರಯಾಣವನ್ನು ಕುರಿತು ಹಂಚಿಕೊಳ್ಳಲು ಹೇಳಿರಿ.
- **ನಿಮ್ಮ ಕಥೆ –** ಅವರ ಅನುಭವಕ್ಕೆ ತಕ್ಕಂತೆ ರೂಪಿಸಿ ನಿಮ್ಮ ಸಾಕ್ಷಿಯನ್ನು ಹಂಚಿಕೊಳ್ಳಿರಿ.
- **ದೇವರ ಕಥೆ –** ಅಂತಿಮವಾಗಿ ಅವರ ಲೋಕದ ದೃಷ್ಟಿಕೋನ, ಮೌಲ್ಯಗಳು ಮತ್ತು ಆದ್ಯತೆಗಳೊಂದಿಗೆ ಸಂಬಂಧ ಕಲ್ಪಿಸುವ ರೀತಿಯಲ್ಲಿ ದೇವರ ಕಥೆಯನ್ನು ಹಂಚಿಕೊಳ್ಳಿರಿ.

ನಿಮ್ಮ ಸಾಕ್ಷಿಯು ಉದ್ದವಾಗಿರುವ ಅಥವಾ ಪ್ರಭಾವ ಬೀರದ ಹೆಚ್ಚಿನ ವಿವರಗಳನ್ನು ಹಂಚಿಕೊಳ್ಳುವ ಅಗತ್ಯವಿಲ್ಲ. ನಿಮ್ಮ ಕಥೆಯನ್ನು ಮೂರು ನಿಮಿಷಗಳಿಗೆ ಸೀಮಿತಗೊಳಿಸುವದು ಪ್ರಶ್ನೆಗಳಿಗೆ ಮತ್ತು ಆಳವಾದ ಸಂಭಾಷಣೆಗಳಿಗೆ ಸಮಯವನ್ನು ಕೊಡುತ್ತದೆ.

ಹೇಗೆ ಆರಂಭಿಸಬೇಕೆಂದು ನೀವು ಚಿಂತಿಸಿದರೆ – ಅದನ್ನು ಸರಳವಾಗಿ ಮಾಡಿರಿ. ಜೀವಿತಗಳನ್ನು ಬದಲಾಯಿಸಲು ದೇವರು ನಿಮ್ಮ ಕಥೆಯನ್ನು ಉಪಯೋಗಿಸುವನು, ಆದರೆ ಅದನ್ನು ಹೇಳುವವರು ನೀವೇ ಆಗಿರುತ್ತೀರೆಂದು ನೆನಪಿಡಿ.

**ಚಟುವಟಿಕೆ** [45 ನಿಮಿಷ] – ಎರಡು ಅಥವಾ ಮೂರು ಗುಂಪುಗಳಾಗಿ ವಿಂಗಡಿಸಿ ಮತ್ತು ನಿಮ್ಮ ಸಾಕ್ಷಿಯನ್ನು ಹೇಳುವದಕ್ಕಾಗಿ ಅಭ್ಯಾಸ ಮಾಡಲು ಮುಂದಿನ 45 ನಿಮಿಷಗಳನ್ನು ಕಳೆಯಿರಿ. "ಅವಿಶ್ವಾಸಿ ಅಥವಾ "ತಿಳಿಯದವರು" ಎಂದು ನೀವು ಗುರುತಿಸಿದ 100 ಮಂದಿಯ ನಿಮ್ಮ ಪಟ್ಟಿಯಿಂದ 5 ಜನರನ್ನು ಆರಿಸಿಕೊಳ್ಳಿರಿ. ಈ ಐದು ಜನರಾಗಿ ನಟಿಸಲು ಯಾರನ್ನಾದರೂ ಆರಿಸಿಕೊಳ್ಳಿರಿ ಮತ್ತು ಆ ವ್ಯಕ್ತಿಗೆ ಅರ್ಥಕೊಡುವ ರೀತಿಯಲ್ಲಿ ನಿಮ್ಮ ಸಾಕ್ಷಿ ಹೇಳುವದನ್ನು ಅಭ್ಯಾಸ ಮಾಡಿರಿ.

ನೀವು ಹಂಚಿಕೊಳ್ಳುತ್ತಿರುವ ವ್ಯಕ್ತಿಯೊಂದಿಗೆ ಈ ಮೇಲಿನ ವಿವರವಾದ ಯಾವುದಾದರೂ ಮಾದರಿಯನ್ನು ಅಥವಾ ಆ ವ್ಯಕ್ತಿಯೊಂದಿಗೆ ಚೆನ್ನಾಗಿ ಕಾರ್ಯಮಾಡುತ್ತದೆಂದು ನೀವು ಆಲೋಚಿಸುವ ಬೇರೆ ಯಾವುದಾದರೂ ರೀತಿಯನ್ನು ಉಪಯೋಗಿಸಬಹುದು. ನೀವು ಅಭ್ಯಾಸ ಮಾಡಿದ ನಂತರ ಮತ್ತೊಬ್ಬರಿಗೆ ಅವಕಾಶ ಕೊಡಿರಿ. ಅವರ ಪಟ್ಟಿಯಿಂದ ಐದು ಜನರಲ್ಲಿ ಒಬ್ಬರೆಂದು ನಟಿಸಿರಿ. ನೀವು ಮುಗಿಸಿದ ಸಮಯಕ್ಕೆ, ನಿಮ್ಮ ಸಾಕ್ಷಿಯನ್ನು ಸುಮಾರು ಮೂರು ನಿಮಿಷಗಳು ಅಥವಾ ಕಡಿಮೆ ಸಮಯದಲ್ಲಿ ಹೇಳಲು ನಿಮಗೆ ಸಾಧ್ಯವಾಗಬೇಕು.

## ಕರ್ತನ ಭೋಜನ

**ಯೇಸು ಹೇಳಿದ್ದು –** ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು. ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು ಎಂದು ಹೇಳಿದನು.

ಪರಿಶುದ್ಧ ಸಹಭೋಗ ಅಥವಾ "ಕರ್ತನ ಭೋಜನ" ಇದು ಯೇಸುವಿನಲ್ಲಿರುವ ನಮ್ಮ ನಿಕಟವಾದ ಸಂಬಂಧವನ್ನು ಕುರಿತು ಸಂತೋಷಪಡಲು ಒಂದು ಮಾರ್ಗವಾಗಿದೆ. ಇಲ್ಲಿ ಆಚರಿಸಲು ಒಂದು ಸರಳ ರೀತಿ ಕೊಡಲ್ಪಟ್ಟಿದೆ:

ಯೇಸುವನ್ನು ಹಿಂಬಾಲಿಸುವ ನೀವು ಒಟ್ಟಾಗಿ ಕೂಡಿದಾಗ, ಮೌನವಾಗಿ ಧ್ಯಾನಮಾಡಲು ಸಮಯವನ್ನು ಕಳೆಯಿರಿ, ನಿಮ್ಮ ಪಾಪಗಳನ್ನು ಪರಿಗಣಿಸಿ ಅವುಗಳನ್ನು ಅರಿಕೆ ಮಾಡಿರಿ. ನೀವು ಸಿದ್ಧರಾದಾಗ, ಯಾರಿಗಾದರೂ ಈ ವಾಕ್ಯಭಾಗವನ್ನು ಓದಲು ಹೇಳಿರಿ –

> "ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ – ಕರ್ತನಾದ ಯೇಸು ತಾನು ಹಿಡಿದುಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು – ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು."
>
> 1 ಕೊರಿಂಥ 11:23-24

ನಿಮ್ಮ ಗುಂಪಿಗಾಗಿ ನೀವು ಪ್ರತ್ಯೇಕಿಸಿದ ರೊಟ್ಟಿಯನ್ನು ಕೊಡಿ ಮತ್ತು ಅದನ್ನು ತಿನ್ನಿರಿ. ಓದುವದನ್ನು ಮುದುವರೆಸಿ –

> "ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು – ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ ಅಂದನು."
>
> 1 ಕೊರಿಂಥ 11:25

ನಿಮ್ಮ ಗುಂಪಿಗಾಗಿ ಪ್ರತ್ಯೇಕಿಸಿದ ದ್ರಾಕ್ಷಾರಸವನ್ನು ಹಂಚಿಕೊಂಡು ಕುಡಿಯಿರಿ. ಓದುವದನ್ನು ಮುಕ್ತಾಯಗೊಳಿಸಿ –

“ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ.”

1 ಕೊರಿಂಥ 11:26

ಪ್ರಾರ್ಥನೆ ಮತ್ತು ಹಾಡುವದರ ಮೂಲಕ ಆಚರಿಸಿರಿ. ನೀವು ಕರ್ತನ ಭೋಜನದಲ್ಲಿ ಪಾಲುಗೊಂಡಿದ್ದೀರಿ. ನೀವು ಆತನವರು ಮತ್ತು ಆತನು ನಿಮ್ಮವನು!

**ಚಟುವಟಿಕೆ** [10 ನಿಮಿಷಗಳು] – ನಿಮ್ಮ ಗುಂಪಿನೊಂದಿಗೆ ಕರ್ತನ ಭೋಜನವನ್ನು ಆಚರಿಸುತ್ತಾ ಮುಂದಿನ 10 ನಿಮಿಷಗಳನ್ನು ಕಳೆಯಿರಿ.

## ಅಧಿವೇಶನ 05

ಈ ಅಧಿವೇಶನದಲ್ಲಿ ನೆರೆಹೊರೆಯವರನ್ನು ಯೇಸುವಿಗಾಗಿ ಸಿದ್ಧಪಡಿಸಲು ಪ್ರಾರ್ಥನಾ ನಡಿಗೆಯು ಹೇಗೆ ಬಲವಾದದ್ದೆಂದು ನಾವು ಕಲಿತುಕೊಳ್ಳುತ್ತೇವೆ ಮತ್ತು ಸಂಧಿಸಲು ಮತ್ತು ಹೊಸ ಶಿಷ್ಯರನ್ನು ಮಾಡಲು ನಮಗೆ ಸಹಾಯ ಮಾಡುವ ಪ್ರಾರ್ಥನೆಗಾಗಿ ಸರಳವಾದ ಅಂದರೆ ಬಲವಾದ ಪ್ರಾರ್ಥನಾ ಮಾದರಿಯನ್ನು ನಾವು ಕಲಿತುಕೊಳ್ಳುತ್ತೇವೆ.

### ಪ್ರಾರ್ಥನಾ ನಡಿಗೆ

ದೇವರ ವಾಕ್ಯವು ಹೇಳುವದೇನೆಂದರೆ, "ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾ ಸ್ತುತಿಗಳನ್ನೂ ಮಾಡಬೇಕೆಂದು ಬೋಧಿಸುತ್ತೇನೆ. ನಮಗೆ ಸುಖ ಸಮಾಧಾನಗಳು ಉಂಟಾಗಿ ನಾವು ಪೂರ್ಣಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು. ಹಾಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿ ಯೋಗ್ಯವಾಗಿಯೂ ಅದೆ ಎಲ್ಲ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ ಚಿತ್ತವಾಗಿದೆ."

ಪ್ರಾರ್ಥನಾ ನಡಿಗೆಯು ಇತರರಿಗಾಗಿ ಪ್ರಾರ್ಥಿಸಲು ದೇವರ ಆಜ್ಞೆಗೆ ವಿಧೇಯರಾಗುವ ಸರಳವಾದ ಮಾರ್ಗವಾಗಿದೆ. ಸುತ್ತಲೂ ನಡೆದಾಡುವಾಗ ದೇವರಿಗೆ ಪ್ರಾರ್ಥಿಸುವದು.

ನಮ್ಮ ಕಣ್ಣುಗಳನ್ನು ಮುಚ್ಚುವದು ಮತ್ತು ನಮ್ಮ ಕಣ್ಣುಗಳನ್ನು ಬಾಗಿಸುವದಕ್ಕೆ ಬದಲಾಗಿ, ನಮ್ಮ ಸುತ್ತಲೂ ನೋಡುವ ಅಗತ್ಯತೆಗಳ ಕಡೆಗೆ ನಮ್ಮ ಕಣ್ಣುಗಳನ್ನು ತೆರೆಯುತ್ತೇವೆ ಮತ್ತು ದೇವರು ಮಧ್ಯಪ್ರವೇಶಿಸುವದಕ್ಕಾಗಿ ತಗ್ಗಿಸುವದರಿಂದ ಬೇಡಿಕೊಳ್ಳುವದಕ್ಕಾಗಿ ನಮ್ಮ ಹೃದಯಗಳನ್ನು ಬಾಗಿಸುತ್ತೇವೆ.

ನೀವು ಇಬ್ಬರು ಅಥವಾ ಮೂವರ ಚಿಕ್ಕ ಗುಂಪಿನಿಂದ ಪ್ರಾರ್ಥನಾ ನಡಿಗೆಯನ್ನು ಮಾಡಬಹುದು ಅಥವಾ ನಿಮ್ಮಷ್ಟಕ್ಕೆ ನೀವೇ ಪ್ರಾರ್ಥನಾ ನಡಿಗೆಯನ್ನು ಮಾಡಬಹುದು.

ನೀವು ಗುಂಪಿನೊಂದಿಗೆ ಹೋದರೆ – ಪ್ರತಿಯೊಬ್ಬರು ಗಟ್ಟಿಯಾಗಿ ಪ್ರಾರ್ಥಿಸುವಂತೆ ನಡೆಸಿರಿ, ಪ್ರತಿಯೊಬ್ಬರು ನೋಡುತ್ತಿರುವ ಸಂಗತಿಗಳನ್ನು ಕುರಿತಾಗಿ ಮತ್ತು ದೇವರು ಅವರ ಹೃದಯಗಳಿಗೆ ತರುವ ಅಗತ್ಯತೆಗಳಿಗಾಗಿ ದೇವರೊಂದಿಗೆ ಸಂಭಾಷಿಸಲಿ. ನಿಮ್ಮಷ್ಟಕ್ಕೆ ನೀವೇ ಹೋದರೆ – ಒಂಟಿಯಾಗಿರುವಾಗ ಮೌನವಾಗಿ ಪ್ರಾರ್ಥಿಸಿ ಮತ್ತು ದಾರಿಯಲ್ಲಿ ನೀವು ಯಾರನ್ನಾದರೂ ಭೇಟಿಯಾದರೆ ಅವರೊಂದಿಗೆ ಗಟ್ಟಿಯಾಗಿ ಪ್ರಾರ್ಥಿಸಿ.

ನಿಮ್ಮ ಪ್ರಾರ್ಥನಾ ನಡಿಗೆಯ ಸಮಯದಲ್ಲಿ ಯಾವ ಸಂಗತಿಗಳಿಗಾಗಿ ಪ್ರಾರ್ಥಿಸಬೇಕೆಂದು ನೀವು ತಿಳಿದುಕೊಳ್ಳಬೇಕಾದ ನಾಲ್ಕು ರೀತಿಗಳು ಕೊಡಲ್ಪಟ್ಟಿವೆ:

**ವೀಕ್ಷಣೆ -** ನೀವು ಏನನ್ನು ನೋಡುತ್ತಿದ್ದೀರಿ? ನೀವು ಅಂಗಳದಲ್ಲಿ ಮಗುವಿನ ಆಟದ ಸಾಮಾನನ್ನು ನೋಡಿದರೆ, ನೀವು ನೆರೆಯವರ ಮಕ್ಕಳಿಗಾಗಿ, ಕುಟುಂಬಗಳಿಗಾಗಿ ಅಥವಾ ಆ ಸ್ಥಳದಲ್ಲಿರುವ ಶಾಲೆಗಳಿಗಾಗಿ ಪ್ರಾರ್ಥಿಸಲು ಪ್ರೇರೆಪಿಸಲ್ಪಡುವಿರಿ.

**ಅನ್ವೇಷಣೆ -** ನಿಮಗೆ ಏನು ತಿಳಿದಿದೆ? ನೀವು ನೆರೆಯವರನ್ನು ಕುರಿತು ತಿಳಿದಿದ್ದರೆ, ಅಲ್ಲಿ ವಾಸಿಸುವ ಜನರನ್ನು ಕುರಿತಾಗಿ ಏನನ್ನಾದರೂ ತಿಳಿದಿರಬಹುದು, ಅಥವಾ ಆ ಸ್ಥಳವು ಅಪರಾಧ ಅಥವಾ ಅನ್ಯಾಯದಿಂದ ಕಷ್ಟಪಡುತ್ತಿದ್ದರೆ, ಈ ಸಂಗತಿಗಳನ್ನು ಕುರಿತಾಗಿ ಪ್ರಾರ್ಥಿಸಿ ಮತ್ತು ದೇವರು ಕಾರ್ಯಮಾಡುವಂತೆ ಬೇಡಿಕೊಳ್ಳಿರಿ.

**ಪ್ರಕಟನೆ** - ಒಂದು ನಿರ್ಧಿಷ್ಟವಾದ ಅಗತ್ಯತೆ ಅಥವಾ ಪ್ರಾರ್ಥನೆಯ ಭಾಗಕ್ಕೆ ಪವಿತ್ರಾತ್ಮನು ನಿಮ್ಮ ಹೃದಯವನ್ನು ತಳ್ಳುವನು ಅಥವಾ ನಿಮ್ಮ ಮನಸ್ಸಿಗೆ ಒಂದು ಆಲೋಚನೆಯನ್ನು ತರುವನು. ಕಿವಿಗೊಡಿರಿ – ಮತ್ತು ಪ್ರಾರ್ಥಿಸಿರಿ!

**ವಾಕ್ಯ –** ನಿಮ್ಮ ನಡೆಗಾಗಿ ಸಿದ್ಧತೆಯಲ್ಲಿ ದೇವರ ವಾಕ್ಯದ ಒಂದು ಭಾಗವನ್ನು ಓದಿರಬಹುದು ಅಥವಾ ನೀವು ನಡೆಯುವಾಗ ಪವಿತ್ರಾತ್ಮನು ನಿಮ್ಮ ಮನಸ್ಸಿಗೆ ಒಂದು ವಾಕ್ಯವನ್ನು ತರಬಹುದು. ವಾಕ್ಯಭಾಗವನ್ನು ಕುರಿತು ಮತ್ತು ಆ ಸ್ಥಳದಲ್ಲಿರುವ ಜನರ ಮೇಲೆ ಹೇಗೆ ಪ್ರಭಾವ ಬೀರಬಹುದೆಂದು ಪ್ರಾರ್ಥಿಸಿ.

ನಿಮ್ಮ ಪ್ರಾರ್ಥನಾ ನಡಿಗೆಯ ಸಮಯದಲ್ಲಿ ನೀವು ಗಮನಿಸಬಹುದಾದ ಪ್ರಭಾವ ಬೀರುವ ಐದು ಕ್ಷೇತ್ರಗಳು ಇಲ್ಲಿ ಕೊಡಲ್ಪಟ್ಟಿವೆ:

**ಸರ್ಕಾರ –** ಸರ್ಕಾರದ ಕೇಂದ್ರಗಳನ್ನು ಗಮನಿಸಿ ಅವುಗಳಿಗಾಗಿ ಪ್ರಾರ್ಥಿಸಿ, ಅವು ನ್ಯಾಯಾಲಯಗಳು, ಆಯೋಗದ ಕಟ್ಟಡಗಳು ಅಥವಾ ಕಾನೂನು ಜಾರಿ ಕಛೇರಿಗಳು. ಆ ಸ್ಥಳದ ಸಂರಕ್ಷಣೆ, ನ್ಯಾಯ ಮತ್ತು ಅವುಗಳ ನಾಯಕರ ದೈವೀಕ ಜ್ಞಾನಕ್ಕಾಗಿ ಪ್ರಾರ್ಥಿಸಿ.

**ವ್ಯಾಪಾರ ಮತ್ತು ವಾಣಿಜ್ಯ –** ವಾಣಿಜ್ಯ ಕೇಂದ್ರಗಳನ್ನು ಹುಡುಕಿ ಅವುಗಳಿಗಾಗಿ ಪ್ರಾರ್ಥಿಸಿರಿ, ಅವು ಹಣಕಾಸಿನ ಜಿಲ್ಲೆಗಳು ಅಥವಾ ಮಾರುಕಟ್ಟೆಯ ಪ್ರದೇಶ. ನೀತಿ ನ್ಯಾಯದ ಬಂಡವಾಳ ಹೂಡುವಿಕೆ ಮತ್ತು ಸಂಪನ್ಮೂಲಗಳನ್ನು ಉತ್ತಮ ಉಸ್ತುವಾರಿಕೆಯಿಂದ ನಡೆಸಲು ಪ್ರಾರ್ಥಿಸಿ. ಆರ್ಥಿಕ ನೀತಿ ಮತ್ತು ಅವಕಾಶ ಮತ್ತು ಉದಾರತೆ ಮತ್ತು ಲಾಭಕ್ಕಿಂತ ಜನರನ್ನು ಪರಿಗಣಿಸುವ ದೈವೀಕತೆಗಾಗಿ ಪ್ರಾರ್ಥಿಸಿ.

**ಶಿಕ್ಷಣ –** ಶಿಕ್ಷಣ ಕೇಂದ್ರಗಳನ್ನು ಹುಡುಕಿ ಅವುಗಳಿಗಾಗಿ ಪ್ರಾರ್ಥಿಸಿ, ಅವು ಶಾಲೆಗಳು ಮತ್ತು ಆಡಳಿತ ಕಟ್ಟಡಗಳು, ವೃತ್ತಿಪರ ತರಬೇತಿ ಕೇಂದ್ರಗಳು, ಸಾಮಾಜಿಕ ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳು ಆಗಿವೆ. ದೇವರ ಸತ್ಯತೆಯನ್ನು ಬೋಧಿಸುವ ಮತ್ತು ತಮ್ಮ ವಿದ್ಯಾರ್ಥಿಗಳ ಮನಸ್ಸುಗಳನ್ನು ಕಾಪಾಡುವ ನೀತಿವಂತ ಶಿಕ್ಷಕರಿಗಾಗಿ ಪ್ರಾರ್ಥಿಸಿ. ಸುಳ್ಳು ಅಥವಾ ಗಲಿಬಿಲಿಯನ್ನು ಉಂಟುಮಾಡಲು ಪ್ರಯತ್ನಿಸುವ ಪ್ರತಿಯೊಂದು ಪ್ರಯತ್ನವನ್ನು ತಡೆಯುವಂತೆ ದೇವರಿಗೆ ಪ್ರಾರ್ಥಿಸಿ. ಈ ಸ್ಥಳಗಳು ಸೇವೆ ಮಾಡಲು ಮತ್ತು ಮುನ್ನಡೆಸಲು ಹೃದಯವನ್ನು ಹೊಂದಿರುವ ಬುದ್ಧಿವಂತ ಪ್ರಜೆಗಳನ್ನು ಕಳುಹಿಸುವಂತೆ ಪ್ರಾರ್ಥಿಸಿ.

**ಸಂಪರ್ಕ –** ಸಂಪರ್ಕದ ಕೇಂದ್ರಗಳಿಗಾಗಿ ಹುಡುಕಿ ಅವುಗಳಿಗಾಗಿ ಪ್ರಾರ್ಥಿಸಿ, ಅವು ರೇಡಿಯೋ ಕೇಂದ್ರಗಳು ಟಿವಿ ಕೇಂದ್ರಗಳು ಮತ್ತು ವಾರ್ತಾ ಪತ್ರಿಕೆ ಪ್ರಸಾರಕರು. ದೇವರ ಕಥೆ ಮತ್ತು ಆತನನ್ನು ಹಿಂಬಾಲಿಸುವವರ ಸಾಕ್ಷಿಯು ಪಟ್ಟಣದಲ್ಲೆಡೆ ಮತ್ತು ಲೋಕದೆಲ್ಲೆಡೆ ಸಾರಲ್ಪಡುವಂತೆ ಪ್ರಾರ್ಥಿಸಿ. ಆತನ ಸಂದೇಶವು ಆತನ ಜನರಿಗೆ ಆತನ ಮಾಧ್ಯಮದ ಮೂಲಕ ತಲುಪುವಂತೆ ಮತ್ತು ದೇವರ ಜನರು ಎಲ್ಲೆಡೆ ದೇವರ ಕೆಲಸವನ್ನು ನೋಡುವಂತೆ ಪ್ರಾರ್ಥಿಸಿ.

**ಆತ್ಮಿಕತೆ –** ಆತ್ಮಿಕ ಕೇಂದ್ರಗಳನ್ನು ಹುಡುಕಿ ಅವುಗಳಿಗಾಗಿ ಪ್ರಾರ್ಥಿಸಿ, ಅವು ಸಭಾಕಟ್ಟಡಗಳು, ಮಸೀದಿಗಳು ಅಥವಾ ದೇವಸ್ಥಾನಗಳು. ಆತ್ಮಿಕತೆಯನ್ನು ಹುಡುಕುವ ಪ್ರತಿಯೊಬ್ಬರು ಯೇಸುವಿನಲ್ಲಿ ಸಮಾಧಾನವನ್ನು ಮತ್ತು ಆದರಣೆಯನ್ನು ಕಂಡುಕೊಳ್ಳುವಂತೆ ಮತ್ತು ಯಾವುದೇ ಸುಳ್ಳು ಧರ್ಮದಿಂದ ಚಂಚಲ ಅಥವಾ ಗಲಿಬಿಲಿಯಾಗದಿರಲು ಪ್ರಾರ್ಥಿಸಿ.

**ಚಟುವಟಿಕೆ** [60-90 ನಿಮಿಷಗಳು] ಇಬ್ಬರು ಅಥವಾ ಮೂವರ ಗುಂಪುಗಳಾಗಿ ವಿಂಗಡಿಸಿ ಮತ್ತು ಪ್ರಾರ್ಥನಾ ನಡಿಗೆಯನ್ನು ಅಭ್ಯಾಸ ಮಾಡಲು ಸಮುದಾಯಕ್ಕೆ ಹೋಗಿರಿ. ಸ್ಥಳವನ್ನು ಆರಿಸಿಕೊಳ್ಳುವದು ನಿಮ್ಮ ಪ್ರಸ್ತುತ ಅಧಿವೇಶನದಿಂದ ಎದ್ದು ನಡೆಯುವಷ್ಟು ಅಥವಾ ಒಂದು ಸ್ಥಳಕ್ಕಾಗಿ ಪ್ರಾರ್ಥಿಸಿ ಯೋಜನೆ ಮಾಡುವಷ್ಟು ಸರಳವಾಗಿರಬಹುದು. ದೇವರು ನಡಿಸಿದಂತೆ ಹೋಗಿರಿ ಮತ್ತು ಈ ಚಟುವಟಿಕೆಗಾಗಿ 60-90 ನಿಮಿಷಗಳು ಕಳೆಯಲು ಯೋಜನೆ ಮಾಡಿರಿ.

**ಟಿಪ್ಪಣಿ –** ನೀವು ಹೋಗುವದಕ್ಕಿಂತ ಮುಂಚಿತಾಗಿ ಈ ಕೆಳಗೆ ಕೊಡಲ್ಪಟ್ಟಿರುವ B.L.E.S.S. ಪ್ರಾರ್ಥನೆಯನ್ನು ಕಲಿತು ಅಭ್ಯಾಸ ಮಾಡಲು ಖಚಿತಪಡಿಸಿಕೊಳ್ಳಿರಿ.

## ಬಿ.ಎಲ್.ಇ.ಎಸ್.ಎಸ್. (B.L.E.S.S.) ಪ್ರಾರ್ಥಿಸಿರಿ

ನಿಮ್ಮ ಪ್ರಾರ್ಥನಾ ನಡಿಗೆಯಲ್ಲಿ ನೀವು ಸಂಧಿಸುವ ಜನರಿಗಾಗಿ ಪ್ರಾರ್ಥಿಸಲು ಇಲ್ಲಿ ಐದು ರೀತಿಗಳು ಕೊಡಲ್ಪಟ್ಟಿವೆ:

ನೀವು ನಡೆದು ಪ್ರಾರ್ಥಿಸುವಾಗ, ದಾರಿಯಲ್ಲಿ ನೀವು ಸಂಧಿಸುವ ವ್ಯಕ್ತಿಗಳು ಅಥವಾ ಗುಂಪುಗಳಿಗಾಗಿ ದೇವರ ಆತ್ಮನ ಪ್ರೇರಣೆಗೆ ಕಿವಿಗೊಡಲು ಮತ್ತು ಅವಕಾಶಕ್ಕಾಗಿ ಎಚ್ಚರವಾಗಿರ್ರಿ.

ನೀವು ಹೀಗೆ ಹೇಳಬಹುದು, "ನಾವು ಈ ಸಮುದಾಯಕ್ಕಾಗಿ ಪ್ರಾರ್ಥಿಸುತ್ತಿದ್ದೇವೆ. ನಿಮ್ಮ ಯಾವುದಾದರೂ ವಿಷಯಕ್ಕಾಗಿ ನಾವು ಪ್ರಾರ್ಥಿಸಬೇಕೋ?" ಅಥವಾ ಹೀಗೆ ಹೇಳಿರಿ, "ನಾನು ಈ ಪ್ರದೇಶಕ್ಕಾಗಿ ಪ್ರಾರ್ಥಿಸುತ್ತಿದ್ದೇನೆ. ನಾವು ಪ್ರಾರ್ಥಿಸಬೇಕಾದ ಯಾವುದಾದರೂ ಸಂಗತಿಯನ್ನು ನೀವು ತಿಳಿದಿದ್ದೀರಾ?" ನೀವು ಅವರ ಪ್ರತ್ಯುತ್ತರವನ್ನು ಕೇಳಿಸಿಕೊಂಡ ನಂತರ, ಅವರ ಸ್ವಂತ ಅಗತ್ಯತೆಗಳನ್ನು ಕುರಿತಾಗಿ ಕೇಳಬಹುದು. ಅವರು ಹಂಚಿಕೊಂಡರೆ, ಅವರಿಗಾಗಿ ಆಗಲೇ ಪ್ರಾರ್ಥಿಸಿ.ಕರ್ತನು ನಿಮ್ಮನ್ನು ನಡೆಸಿದರೆ ನೀವು ಇತರೆ ಅಗತ್ಯತೆಗಳಿಗಾಗಿ ಸಹ ಪ್ರಾರ್ಥಿಸಬಹುದು.

ನೀವು ಪ್ರಾರ್ಥಿಸಬಹುದಾದ ಐದು ವಿವಿಧ ರೀತಿಗಳನ್ನು ನೆನಪಿಸಿಕೊಳ್ಳಲು ನಿಮಗೆ ಸಹಾಯ ಮಾಡುವ ಬಿ.ಎಲ್.ಇ.ಎಸ್.ಎಸ್. (B.L.E.S.S.) ಪದವನ್ನು ಉಪಯೋಗಿಸಿ:

- B ದೇಹ (ಆರೋಗ್ಯ)
- L ದುಡಿಮೆ (ಕೆಲಸ ಮತ್ತು ಹಣಕಾಸು)
- E ಮನೋಭಾವನೆ (ನೈತಿಕತೆ)
- S ಸಾಮಾಜಿಕ (ಸಂಬಂಧಗಳು)
- S ಆತ್ಮಿಕ (ದೇವರನ್ನು ಹೆಚ್ಚಾಗಿ ತಿಳಿದುಕೊಳ್ಳುವದು ಮತ್ತು ಪ್ರೀತಿಸುವದು)

ಅನೇಕರ ವಿಷಯದಲ್ಲಿ, ನೀವು ಸಾಕಷ್ಟು ಪ್ರಾರ್ಥಿಸಿದರೆ ಜನರು ಕೃತಜ್ಞತೆಯುಳ್ಳವರಾಗಿರುವರು.

ಒಂದುವೇಳೆ ಆ ವ್ಯಕ್ತಿಯು ಕ್ರೈಸ್ತನಲ್ಲದಿದ್ದರೆ, ನಿಮ್ಮ ಪ್ರಾರ್ಥನೆಯು ಆತ್ಮಿಕ ಸಂಭಾಷಣೆಗೆ ಬಾಗಿಲನ್ನು ತೆರೆಯಬಹುದು ಮತ್ತು ನಿಮ್ಮ ಕಥೆಯನ್ನು ಹಾಗೂ ದೇವರ ಕಥೆಯನ್ನು ಹಂಚಿಕೊಳ್ಳಲು ಅವಕಾಶವನ್ನು ಕೊಡಬಹುದು. ನೀವು ಅವರನ್ನು ಸತ್ಯವೇದ ಅಧ್ಯಯನಕ್ಕೆ ಆಮಂತ್ರಿಸಬಹುದು ಅಥವಾ ಅವರ ಮನೆಯಲ್ಲೇ ಅಧ್ಯಯನವನ್ನು ನಡೆಸಬಹುದು.

ಒಂದುವೇಳೆ ಆ ವ್ಯಕ್ತಿಯು ಕ್ರೈಸ್ತನಾಗಿದ್ದರೆ, ಅವರನ್ನು ನಿಮ್ಮ ಪ್ರಾರ್ಥನಾ ನಡಿಗೆಗೆ ಸೇರಿಸಿಕೊಳ್ಳಬಹುದು ಅಥವಾ ಅವರು ಪ್ರಾರ್ಥನಾ ನಡಿಗೆಯನ್ನು ಹೇಗೆ ಮಾಡಬಹುದೆಂದು ಮತ್ತು ಪ್ರಭಾವದ ಪ್ರದೇಶಗಳಿಗಾಗಿ ಪ್ರಾರ್ಥಿಸಲು ಸರಳ ಹೆಜ್ಜೆಗಳನ್ನು ಅಥವಾ ದೇವರ ಕುಟುಂಬವನ್ನು ಇನ್ನು ಹೆಚ್ಚಾಗಿ B.L.E.S.S. ಪ್ರಾರ್ಥನೆಯ ತರಬೇತಿಯನ್ನು ಕೊಡಬಹುದು.

**ಚಟುವಟಿಕೆ** [15 ನಿಮಿಷ] – ಎರಡು ಅಥವಾ ಮೂರು ಗುಂಪುಗಳಾಗಿ ವಿಂಗಡಿಸಿ ಮತ್ತು ಬಿ.ಎಲ್.ಇ.ಎಸ್.ಎಸ್. (B.L.E.S.S.) ಪ್ರಾರ್ಥನೆಯನ್ನು ಅಭ್ಯಾಸ ಮಾಡಲು ಮುಂದಿನ 15 ನಿಮಿಷಗಳನ್ನು ಕಳೆಯಿರಿ. B.L.E.S.S. ಪ್ರಾರ್ಥನೆಯ ಐದು ಭಾಗಗಳನ್ನು ಪ್ರಾರ್ಥಿಸಲು ಅಭ್ಯಾಸ ಮಾಡಿರಿ. ಯಾರಿಗಾದರೂ ಪ್ರಾರ್ಥಿಸಿರಿ ಮತ್ತು B.L.E.S.S. ಪ್ರಾರ್ಥನೆಯನ್ನು ಇತರರು ಅರ್ಥಮಾಡಿಕೊಳ್ಳಲು ಮತ್ತು ಉಪಯೋಗಿಸಲು ನೀವು ಹೇಗೆ ತರಬೇತಿ ಕೊಡುತ್ತೀರೆಂದು ಸಹ ಅಭ್ಯಾಸ ಮಾಡಿರಿ.

## ಅಧಿವೇಶನ 06

ಈ ಅಧಿವೇಶನದಲ್ಲಿ, - ಕೇವಲ ವಿಧೇಯರಾಗದೆ ಇರುವ ಅನೇಕ ವರುಷಗಳಿಂದ ತಿಳುವಳಿಕೆ ಮತ್ತು ತರಬೇತಿಯನ್ನು ಹೊಂದಿರುವವರಿಗಿಂತ ಹೆಚ್ಚಾಗಿ, ನಂಬಿಗಸ್ತ ಹಿಂಬಾಲಕರನ್ನು – ಅವರು ಅತಿ ಹೊಸಬರಾಗಿದ್ದರೂ ಸಹ – ದೇವರು ಹೇಗೆ ಉಪಯೋಗಿಸುತ್ತಾನೆಂದು ಕಲಿತುಕೊಳ್ಳುತ್ತೇವೆ. ಮತ್ತು ಶಿಷ್ಯರು ಬಹಳ ವೇಗವಾಗಿ ಹೆಚ್ಚಾಗಲು ಸಹಾಯವಾಗುವ ಸಂಗತಿಯನ್ನು ನಾವು ಮೊದಲು ನೋಡುತ್ತೇವೆ.

### 3/3 ಗುಂಪುಗಳ ವ್ಯವಸ್ಥೆ

ಯೇಸು ಹೇಳಿದ್ದು – “ಇಬ್ಬರೂ ಮೂವರೂ ನನ್ನ ಹೆಸರಿನಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ.”

ಇದು ಬಲವುಳ್ಳ ವಾಗ್ದಾನವಾಗಿದೆ ಮತ್ತು ಯೇಸುವಿನ ಹಿಂಬಾಲಕರಾದ ಪ್ರತಿಯೊಬ್ಬರು ಇದರ ಪ್ರಯೋಜನವನ್ನು ಹೊಂದಿಕೊಳ್ಳಬೇಕು. ಆದರೆ ನೀವು ಗುಂಪಾಗಿ ಒಟ್ಟಾಗಿ ಕೂಡಿ ಬಂದಾಗ, ನಿಮ್ಮ ಸಮಯವನ್ನು ಹೇಗೆ ಕಳೆಯಬೇಕಾಗಿದೆ?

ಒಂದು 3/3 ರ ಗುಂಪು ಅವರ ಸಮಯವನ್ನು ಒಟ್ಟಾಗಿ ಮೂರು ಭಾಗಗಳಾಗಿ ವಿಂಗಡಿಸುತ್ತದೆ, ಹೀಗೆ ಅವರು ಯೇಸು ಆಜ್ಞಾಪಿಸುವ ಅತಿಮುಖ್ಯವಾದ ಕೆಲವು ವಿಷಯಗಳಿಗೆ ವಿಧೇಯರಾಗಲು ಅಭ್ಯಾಸಮಾಡಬಹುದು.

ಇದು ಹೀಗೆ ಕೆಲಸ ಮಾಡುತ್ತದೆ:

**ಹಿಂದಕ್ಕೆ ನೋಡಿರಿ** (ನಿಮ್ಮ ಸಮಯದ 1/3 ಭಾಗ)

**ಆರೈಕೆ ಮತ್ತು ಪ್ರಾರ್ಥನೆ:** ಪ್ರತಿಯೊಬ್ಬರು ಯಾವ ವಿಷಯಕ್ಕಾಗಿ ಕೃತಜ್ಞತೆಯುಳ್ಳವರಾಗಿದ್ದಾರೋ ಅದನ್ನು ಹಂಚಿಕೊಳ್ಳಲಿ. ನಂತರ ಪ್ರತಿಯೊಬ್ಬ ವ್ಯಕ್ತಿಯು ತಮಗೆ ಹೋರಾಟವಿರುವ ಯಾವುದಾದರೂ ಸಂಗತಿಯನ್ನು ಹಂಚಿಕೊಳ್ಳಬೇಕು. ಅವರು ಹಂಚಿಕೊಳ್ಳುವ ವಿಷಯಗಳಿಗಾಗಿ ಪ್ರಾರ್ಥಿಸಲು ಆ ವ್ಯಕ್ತಿಯನ್ನು ತಮ್ಮ ಬಲಗಡೆಯಲ್ಲಿ ನಿಲ್ಲಿಸಿಕೊಳ್ಳಲಿ. ಹೆಚ್ಚಾಗಿ ಗಮನ ಹರಿಸಬೇಕಾದ ಯಾವುದಾದರು ಕಷ್ಟವನ್ನು ಯಾರಾದರೂ ಹೊಂದಿದ್ದರೆ, ಆ ವ್ಯಕ್ತಿಯ ಆರೈಕೆಗಾಗಿ ಕೊನೆಯಲ್ಲಿ ಅವರ ಜೊತೆ ಉಳಿದುಕೊಳ್ಳಿರಿ.

**ದರ್ಶನ:** ಒಟ್ಟಾಗಿ ಹಾಡುತ್ತಾ ಸಮಯವನ್ನು ಕಳೆಯಿರಿ ಮತ್ತು ದೇವರನ್ನು ಪ್ರೀತಿಸುವ, ಇತರರನ್ನು ಪ್ರೀತಿಸುವ, ಇತರರೊಂದಿಗೆ ಯೇಸುವನ್ನು ಹಂಚಿಕೊಳ್ಳುವ, ಹೊಸ ಗುಂಪುಗಳನ್ನು ಆರಂಭಿಸುವ, ಮತ್ತು ಹೀಗೆ ಮಾಡಲು ಇತರರಿಗೆ ಸಹಾಯ ಮಾಡುವ ವಿಷಯಗಳಿಗೆ ಲೇಖನವನ್ನು ಬರೆಯಿರಿ. ಈ ವಿಷಯಗಳನ್ನು ತಿಳಿಯಪಡಿಸುವ ಸತ್ಯವೇದ ವಾಕ್ಯಭಾಗಗಳನ್ನು ಸಹ ಜನರು ಪರ್ಯಾಯವಾಗಿ ಹಂಚಿಕೊಳ್ಳಬಹುದು.

**ಪರಿಶೀಲನೆ:** ಕಳೆದ ವಾರದಲ್ಲಿ ತಮ್ಮ ಸಮರ್ಪಣೆಗಳನ್ನು ಕುರಿತು ಬರೆದ ಸಂಗತಿಗಳೊಂದಿಗೆ ಹೇಗೆ ಕಾರ್ಯಮಾಡಿದರೆಂದು ಪ್ರತಿಯೊಬ್ಬರು ಹಂಚಿಕೊಳ್ಳಲಿ:

1. ನೀವು ಕಲಿತವುಗಳಿಗೆ ಹೇಗೆ ವಿಧೇಯರಾಗಿದ್ದೀರಿ?
2. ನೀವು ಕಲಿತವುಗಳನ್ನು ಕುರಿತು ಯಾರಿಗೆ ತರಬೇತಿ ಕೊಟ್ಟಿದ್ದೀರಿ?
3. ನಿಮ್ಮ ಕಥೆಯನ್ನಾಗಲಿ ಅಥವಾ ದೇವರ ಕಥೆಯನ್ನಾಗಲಿ ನೀವು ಯಾರೊಂದಿಗೆ ಹಂಚಿಕೊಂಡಿದ್ದೀರಿ?

ಅವರು ಒಂದುವೇಳೆ ತಮ್ಮ ಸಮರ್ಪಣೆಯನ್ನು ಅನುಸರಿಸಲು ಮರೆತು ಹೋಗಿದ್ದರೆ ಅಥವಾ ಹಾಗೆ ಮಾಡಲು ಅವಕಾಶ ಸಿಗದೆ ಇದ್ದರೆ, ಆಗ ಕಳೆದ ವಾರದ ಸಮರ್ಪಣೆಗಳನ್ನು ಈ ವಾರದ ಸಮರ್ಪಣೆಗಳೊಂದಿಗೆ ಸೇರಿಸಬೇಕಾಗಿದೆ. ದೇವರಿಂದ ಸ್ಪಷ್ಟವಾಗಿ ಕೇಳಿದ ಯಾವುದಾದರೂ ಸಂಗತಿಗೆ ವಿಧೇಯರಾಗಲು ಕೇವಲ ನಿರಾಕರಿಸಿದರೆ, ಆಗ ಅದನ್ನು ಸಭೆಯ ಶಿಸ್ತಿನ ಸಮಸ್ಯೆಯೆಂದು ಪರಿಗಣಿಸಿ.

**ಮೇಲಕ್ಕೆ ನೋಡಿರಿ** (ನಿಮ್ಮ ಸಮಯದ 1/3 ಭಾಗ)

**ಪ್ರಾರ್ಥಿಸಿ:** ಸರಳವಾಗಿ ಮತ್ತು ಸಂಕ್ಷಿಪ್ತವಾಗಿ ದೇವರೊಂದಿಗೆ ಮಾತನಾಡಿರಿ. ಈ ವಾಕ್ಯಭಾಗವನ್ನು ಕಲಿಸಲು ದೇವರನ್ನು ಬೇಡಿಕೊಳ್ಳಿರಿ.
**ಓದಿ ಮತ್ತು ಚರ್ಚಿಸಿ:** ಈ ವಾರದ ವಾಕ್ಯಭಾಗವನ್ನು ಓದಿರಿ. ಈ ಕೆಳಗಿನ ಪ್ರಶ್ನೆಗಳನ್ನು ಚರ್ಚಿಸಿ:

1. ಈ ವಾಕ್ಯಭಾಗದಲ್ಲಿ ಯಾವ ವಿಷಯವು ನಿಮಗೆ ಇಷ್ಟವಾಯಿತು?
2. ಈ ವಾಕ್ಯಭಾಗದಲ್ಲಿ ನಿಮಗೆ ಯಾವುದು ಸವಾಲಾಗಿತ್ತು ಅಥವಾ ಅರ್ಥಮಾಡಿಕೊಳ್ಳಲು ಕಷ್ಟಕರವಾಗಿತ್ತು?

ಈ ವಾರದ ವಾಕ್ಯಭಾಗವನ್ನು ತಿರಿಗಿ ಓದಿರಿ.

3. ಈ ವಾಕ್ಯಭಾಗದಿಂದ ಜನರನ್ನು ಕುರಿತು ನಾವು ಏನನ್ನು ಕಲಿತುಕೊಳ್ಳಬಹುದು?
4. ಈ ವಾಕ್ಯಭಾಗದಿಂದ ದೇವರನ್ನು ಕುರಿತು ನಾವು ಏನನ್ನು ಕಲಿತುಕೊಳ್ಳಬಹುದು?

**ಮುಂದಕ್ಕೆ ನೋಡಿರಿ** (ನಿಮ್ಮ ಸಮಯದ 1/3 ಭಾಗ)

**ವಿಧೇಯರಾಗಿ. ತರಬೇತಿ ಕೊಡಿ. ಹಂಚಿಕೊಳ್ಳಿರಿ:** ಮೌನವಾಗಿ ಪ್ರಾರ್ಥಿಸಲು ಕನಿಷ್ಠ 5 ನಿಮಿಷ ತೆಗೆದುಕೊಳ್ಳಿರಿ. ಈ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕೆಂದು ಅವರಿಗೆ ತೋರಿಸಲು ಪವಿತ್ರಾತ್ಮನಿಗಾಗಿ ಗುಂಪಿನಲ್ಲಿ ಪ್ರತಿಯೊಬ್ಬರು ಪ್ರಾರ್ಥಿಸಲಿ, ನಂತರ ಸಮರ್ಪಣೆಗಳನ್ನು ಮಾಡಲಿ. ಪ್ರತಿಯೊಬ್ಬರು ಸಮರ್ಪಣೆಗಳನ್ನು ಬರೆಯಬೇಕು, ಇದರಿಂದ ಅವರು ತಿಳುವಳಿಕೆಯಿಂದ ಜನರಿಗಾಗಿ ಪ್ರಾರ್ಥಿಸಬಹುದು ಮತ್ತು ಅವರನ್ನು ಹೊಣೆಗಾರರನ್ನಾಗಿ ಮಾಡಬಹುದು. ಪ್ರತಿ ವಾರ ಪ್ರತಿಯೊಂದು ಪ್ರಶ್ನೆಗೆ ಸಂಬಂಧಪಟ್ಟ ಯಾವುದಾದರೂ ಸಂಗತಿಯನ್ನು ಅವರು ಹೇಳದೆ ಇರಬಹುದು. ಅವರು ದೇವರಿಂದ ಕೇಳಿದ್ದೇವೆಂದು ಖಚಿತವಲ್ಲದ ಸಂಗತಿಯನ್ನು ಹಂಚಿಕೊಂಡರೆ ಅದನ್ನು ಬರೆದಿಟ್ಟುಕೊಳ್ಳಬೇಕು, ಆದರೆ ಈ ವಿಷಯದಲ್ಲಿ ಹೊಣೆಗಾರಿಕೆಯನ್ನು ವಿವಿಧವಾದ ಹಂತಗಳಲ್ಲಿ ನಿರ್ವಹಿಸುವದರಿಂದ ಇದು ಒಳ್ಳೆಯದೆಂದು ಅವರು ಆಲೋಚಿಸಬಹುದು.

5. ಈ ವಾಕ್ಯಭಾಗವನ್ನು ನಾನು ಅನ್ವಯಿಸಿ ವಿಧೇಯನಾಗುವದು ಹೇಗೆ?
6. ಈ ವಾಕ್ಯಭಾಗವನ್ನು ಕುರಿತು ನಾನು ಯಾರಿಗೆ ತರಬೇತಿ ಕೊಡುತ್ತೇನೆ ಅಥವಾ ಹಂಚಿಕೊಳ್ಳುತ್ತೇನೆ?
7. ನನ್ನ ಕಥೆಯನ್ನು [ಸಾಕ್ಷಿ] ಮತ್ತು/ಅಥವಾ ದೇವರ ಕಥೆಯನ್ನು ಈ ವಾರದಲ್ಲಿ ನಾನು ಯಾರೊಂದಿಗೆ ಹಂಚಿಕೊಳ್ಳಬೇಕೆಂದು ದೇವರು ಬಯಸುತ್ತಾನೆ?

**ಅಭ್ಯಾಸ ಮಾಡಿರಿ:** ಇಬ್ಬರು ಅಥವಾ ಮೂವರ ಗುಂಪಿನಲ್ಲಿ, ಪ್ರಶ್ನೆ 5, 6 ಅಥವಾ 7 ರಲ್ಲಿ ನೀವು ಸಮರ್ಪಿಸಿದವುಗಳನ್ನು ಅಭ್ಯಾಸ ಮಾಡಿರಿ. ಉದಾಹರಣೆಗೆ, ಕಷ್ಟಕರವಾದ ಸಂಭಾಷಣೆ ಅಥವಾ ಶೋಧನೆಯನ್ನು ಎದುರಿಸುವದನ್ನು ಕುರಿತು ಒಂದು ಕಿರುನಾಟಕ ಮಾಡಿರಿ; ಈ ದಿನದ ವಾಕ್ಯಭಾಗದ ಬೋಧನೆಯನ್ನು ಅಭ್ಯಾಸ ಮಾಡಿರಿ ಅಥವಾ ಸುವಾರ್ತೆ ಸಾರುವದನ್ನು ಅಭ್ಯಾಸ ಮಾಡಿರಿ.

**ದೇವರೊಂದಿಗೆ ಮಾತನಾಡಿ:** ಅದೇ ಇಬ್ಬರು ಅಥವಾ ಮೂವರ ಗುಂಪಿನಲ್ಲಿ ವ್ಯಕ್ತಿಗತವಾಗಿ ಪ್ರತಿಯೊಬ್ಬ ಸದಸ್ಯರಿಗಾಗಿ ಪ್ರಾರ್ಥಿಸಿ. ಈ ವಾರದಲ್ಲಿ ಯೇಸುವನ್ನು ಕುರಿತು ಕೇಳುವ ಜನರ ಹೃದಯಗಳನ್ನು ಸಿದ್ಧಪಡಿಸಲು ದೇವರನ್ನು ಬೇಡಿಕೊಳ್ಳಿರಿ. ನಿಮ್ಮ ಸಮರ್ಪಣೆಗಳಿಗೆ

ವಿಧೇಯರಾಗಲು ನಿಮಗೆ ಬಲವನ್ನು ಮತ್ತು ಜ್ಞಾನವನ್ನು ಕೊಡಲು ದೇವರನ್ನು ಬೇಡಿಕೊಳ್ಳಿರಿ. ಇದು ಕೂಟದ ಮುಕ್ತಾಯವಾಗಿದೆ.

ಪ್ರತಿಯೊಬ್ಬರು ಮುಗಿಸಿದ ನಂತರ, ಕರ್ತನ ಭೋಜನವನ್ನು ಮಾಡಿರಿ ಅಥವಾ ಒಟ್ಟಾಗಿ ಊಟ ಮಾಡಿರಿ.


**ಟಿಪ್ಪಣಿ –** ಮಾರ್ಗದರ್ಶಿ ಪುಸ್ತಕದ ಅನುಬಂಧದಲ್ಲಿ ನಿಮ್ಮ 3/3 ಗುಂಪುಗಳನ್ನು ಅಧ್ಯಯನ ಮಾಡಲು ವಾಕ್ಯಭಾಗಗಳ ಸರಣಿಗಳು ಕೊಡಲ್ಪಟ್ಟಿವೆ.

## ಅಧಿವೇಶನ 07

ಈ ಅಧಿವೇಶನದಲ್ಲಿ ಒಬ್ಬರಿಂದ ಅನೇಕರ ಬಳಿಗೆ ಹೋಗಲು ಮತ್ತು ಸೇವೆಯನ್ನು ಒಂದು ಸಂಚಲನವನ್ನಾಗಿ ಮಾರ್ಪಡಿಸಲು ಶಿಷ್ಯರಿಗೆ ಸಹಾಯ ಮಾಡುವ ತರಬೇತಿ ಕಾಲಚಕ್ರವನ್ನು ಕುರಿತು ನಾವು ಕಲಿಯುತ್ತೇವೆ. ನಾವು 3/3 ಗುಂಪುಗಳ ಮಾದರಿಯನ್ನು ಸಹ ಅಭ್ಯಾಸಮಾಡುತ್ತೇವೆ ಮತ್ತು ನೀವು ಬಹುಜನರನ್ನಾಗಿ ಮಾಡುವದನ್ನು ಕುರಿತು ಒಟ್ಟಾಗಿ ಕೂಡುವ ರೀತಿಯು ಹೇಗೆ ಪ್ರಭಾವ ಬೀರುತ್ತದೆಂದು ಕಲಿಯುವಿರಿ.

### ತರಬೇತಿ ಕಾಲಚಕ್ರ

ತರಬೇತಿ ಕಾಲಚಕ್ರವು ಮಾದರಿ, ಸಹಾಯಮಾಡುವುದು, ವೀಕ್ಷಣೆ ಮತ್ತು ಬಿಟ್ಟುಬಿಡುವದು ಇವುಗಳನ್ನು ಒಳಗೊಂಡಿದೆ, ಮತ್ತು ಇದು ಹೀಗೆ ಕಾರ್ಯ ಮಾಡುತ್ತದೆ:




**ಮಾದರಿ** ಎಂದರೆ ಸರಳವಾಗಿ ಅಭ್ಯಾಸ ಅಥವಾ ಸಾಧನದ ಉದಾಹರಣೆಯನ್ನು ಕೊಡುವದಾಗಿದೆ. ಇದು ತರಬೇತಿ ಕಾಲಚಕ್ರದ ಸಂಕ್ಷಿಪ್ತ ಭಾಗವಾಗಿದೆ. ಇದನ್ನು ಸಾಮಾನ್ಯವಾಗಿ ಒಂದು ಸಾರಿ ಮಾತ್ರ ಮಾಡಬೇಕಾಗಿದೆ. ಇದು ಕೇವಲ ಅಭ್ಯಾಸ ಅಥವಾ ಸಾಧನವೆಂದು ಅರಿವು ಮೂಡಿಸುವುದು ಮತ್ತು ಇದು ಹೇಗೆ ಕಾಣಿಸುತ್ತದೆ ಎಂದು ಸಾಮಾನ್ಯ ಕಲ್ಪನೆಯನ್ನು ಕೊಡುವುದು. ಯಾರನ್ನಾದರು ಸಿದ್ಧಪಡಿಸಲು ಪುನರಾವರ್ತಿಸಿದ ಮಾದರಿಯು ಪರಿಣಾಮಕರವಾದ ರೀತಿಯಲ್ಲ. ತಮ್ಮಷ್ಟಕ್ಕೆ ತಾವು ಕೌಶಲ್ಯಗಳನ್ನು ಉಪಯೋಗಿಸಲು ಅವರಿಗೆ ಅವಕಾಶ ಕೊಡಬೇಕಾಗಿದೆ.

ಯಾರಾದರು ಸೈಕಲ್ ಚಲಿಸುವದನ್ನು ಮಗು ನೋಡಿದಾಗ, ಅದು ಮಾದರಿಯ ಹಂತವಾಗಿರುತ್ತದೆ.

**ಸಹಾಯಮಾಡಿ** - ಸಹಾಯಮಾಡುವದೆಂದರೆ ಕಲಿಯುವವರಿಗೆ ಕೌಶಲ್ಯವನ್ನು ಅಭ್ಯಾಸಮಾಡಲು ಅವಕಾಶ ಕೊಡುವದು, ಇದು ಮಾದರಿಯಾಗಿರುವದಕ್ಕಿಂತ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಇದು ತರಬೇತಿ ಕೊಡುವವನು "ಕೈಹಿಡಿದುಕೊಳ್ಳುವ" ಹಂತವನ್ನು ಹೊಂದಿರುತ್ತದೆ. ತರಬೇತಿ ಕೊಡುವವನು ಮಾರ್ಗದರ್ಶನ ನೀಡಬೇಕು ಮತ್ತು ಕಲಿಯುವವರಿಗೆ ತರಬೇತಿ ಕೊಡುವದು ಕ್ರಿಯಾತ್ಮಕವಾಗಿ ಪಾತ್ರವನ್ನು ವಹಿಸಬೇಕು. ಕಲಿಯುವವನು ಸಂಪೂರ್ಣವಾಗಿ ಸಮರ್ಥನಾಗುವವರೆಗೆ ಈ ಹಂತವು ಮುಗಿಯುವದಿಲ್ಲ, ಆದರೆ ಇದು ಕೇವಲ ಕೌಶಲ್ಯದ ಮೂಲಗಳನ್ನು ತಿಳಿದುಕೊಳ್ಳುವವರೆಗೆ ಇರುತ್ತದೆ. ಒಂದುವೇಳೆ ಈ ಹಂತವು ಬಹಳ ಕಾಲ ಮುಂದುವರೆದರೆ, ಆಗ ಕಲಿಯುವವನು ತರಬೇತಿ ಕೊಡುವವನ ಮೇಲೆ ಆಧಾರಗೊಳ್ಳುವನು ಮತ್ತು ಎಂದಿಗೂ ಸಂಪೂರ್ಣ ಸಮರ್ಥತೆಗೆ ಬರುವದಿಲ್ಲ. ಸಹಾಯಮಾಡುವ ಹಂತದ ಮುಕ್ತಾಯವು ಕಲಿಯುವವನು ಇತರರಿಗೆ ಮಾದರಿಯಾಗಿರುವದನ್ನು ಗುರುತಿಸಬೇಕು.

ಮಗು ತನ್ನ ಸಮತೋಲನವನ್ನು ಕಾಪಾಡಿಕೊಳ್ಳಲು ಕಲಿಯುತ್ತಿರುವಾಗ ಪೋಷಕರು ಸೈಕಲನ್ನು ಹಿಡಿದುಕೊಂಡಿರುವಾಗ, ಇದು **ಸಹಾಯಮಾಡುವ** ಹಂತವಾಗಿದೆ.

**ವೀಕ್ಷಿಸುವದು** – ವೀಕ್ಷಿಸುವದು ಹೆಚ್ಚಿನ ಕಾಲದ ಹಂತವಾಗಿದೆ. ಇದು ಕಲಿಯುವವರೊಂದಿಗೆ ಹೆಚ್ಚು ಪರೋಕ್ಷ ಸಂಪರ್ಕವನ್ನು ಹೊಂದಿರುತ್ತದೆ. ಆ ಕೌಶಲ್ಯದ ಎಲ್ಲಾ ಅಂಶಗಳನ್ನು ಸಂಪೂರ್ಣವಾಗಿ ಸಮರ್ಥರಾಗುವ ವರೆಗೆ ಪ್ರಯತ್ನಿಸುತ್ತದೆ. ಮೊದಲ ಎರಡು ಹಂತಗಳನ್ನು ಜೋಡಿಸುವವರೆಗೆ ಇದು ಹತ್ತು ಪಟ್ಟು ಅಥವಾ ಇನ್ನು ಹೆಚ್ಚಾಗಿರಬಹುದು. ಈ ಹಂತದಲ್ಲಿ ಕೌಶಲ್ಯವನ್ನು ಉಪಯೋಗಿಸಲು ಕಲಿಯುವವನು ಹೆಚ್ಚು ಜವಾಬ್ದಾರಿಕೆ ಮತ್ತು ಆಸಕ್ತಿಯನ್ನು ತೆಗೆದುಕೊಳ್ಳುವನು. ಶಿಷ್ಯರನ್ನು ಮಾಡುವಾಗ ಈ ಹಂತದ ಮುಕ್ತಾಯಕ್ಕೆ ಗುರುತು ತಾವು ತರಬೇತಿ ಕೊಡುತ್ತಿರುವವರ ಮೂಲಕ ಕಲಿಯುವವರು ನಾಲ್ಕನೇ ತಲೆಮಾರಿಗೆ ಕೌಶಲ್ಯವನ್ನು ಯಶಸ್ವಿಯಾಗಿ ಸಾಗಿಸಿದಾಗ ಉಂಟಾಗುತ್ತದೆ.

ಮಗು ಸೈಕಲ್ ಚಲಿಸುವದನ್ನು ಪೋಷಕರು ವೀಕ್ಷಿಸುತ್ತಿರುವಾಗ, ಮೇಲ್ವಿಚಾರಣೆ ಮಾಡದಿರುವಾಗಲೂ ಸಹ ಮಗು ಸಾಕಷ್ಟು ಕೌಶಲ್ಯವನ್ನು ಮತ್ತು ತಿಳುವಳಿಕೆಯನ್ನು ಹೊಂದಿದೆ ಎಂದು ಖಚಿತಪಡಿಸಿಕೊಳ್ಳುವರು, ಇದು ವೀಕ್ಷಿಸುವ ಹಂತವಾಗಿದೆ.

**ಬಿಟ್ಟುಬಿಡಿ** – ಬಿಟ್ಟು ಬಿಡುವದು ಕಲಿಯುವವನು ಶಿಕ್ಷಕನಿಗೆ ಜೊತೆ ಕೆಲಸಗಾರನಾದಾಗ ಪದವಿ ಪ್ರಾಪ್ತಿಯಾದಂತೆ ಆಗಿರುತ್ತದೆ. ಒಂದುವೇಳೆ ಕಲಿಯುವವರು ಮತ್ತು ತರಬೇತಿಕೊಡುವವರು ಒಂದೇ ಸಂಪರ್ಕದ ಜಾಲದಲ್ಲಿದ್ದರೆ, ಆಗಾಗ ಸಂಪರ್ಕ ಮತ್ತು ಜೊತೆಗಾರರಿಗೆ ತರಬೇತಿಯು ಮುಂದುವರೆಯಬಹುದು.

ಮೇಲ್ವಿಚಾರಣೆಯಿಲ್ಲದೆ ಮಗು ಸೈಕಲನ್ನು ಸಂಪೂರ್ಣವಾಗಿ ಚಲಿಸಲು ಪೋಷಕರು ಬಿಟ್ಟುಡುವಾಗ, ಇದು ಬಿಟ್ಟುಬಿಡುವ ಹಂತವಾಗಿರುತ್ತದೆ.

## 3/3 ಗುಂಪುಗಳ ವ್ಯವಸ್ಥೆಯನ್ನು ಅಭ್ಯಾಸಮಾಡಿರಿ

**ಚಟುವಟಿಕೆ (90 ನಿಮಿಷಗಳು) –** ಪುಟ 19-20 ರಲ್ಲಿರುವ 3/3 ಗುಂಪುಗಳ ವ್ಯವಸ್ಥೆಯ ಭಾಗದಲ್ಲಿರುವ ಮಾದರಿಯನ್ನು ಉಪಯೋಗಿಸಿ 3/3 ಗುಂಪುಗಳ ವ್ಯವಸ್ಥೆಯನ್ನು ಅಭ್ಯಾಸಮಾಡುತ್ತಾ ನಿಮ್ಮ ಗುಂಪು ಮುಂದಿನ 90 ನಿಮಿಷಗಳನ್ನು ಕಳೆಯಲಿ.

- **ಹಿಂದಕ್ಕೆ ನೋಡಿರಿ** – "ನಂಬಿಗಸ್ತಿಕೆಯನ್ನು" ಅಭ್ಯಾಸ ಮಾಡಲು ಕಳೆದ ವಾರದ ಅಧಿವೇಶನದ ಸವಾಲುಗಳನ್ನು ಉಪಯೋಗಿಸಿರಿ.
- **ಮೇಲಕ್ಕೆ ನೋಡಿರಿ** – ಮಾರ್ಕ 5:1-20 ನ್ನು ನಿಮ್ಮ ಗುಂಪಿನ ಓದುವ ವಾಕ್ಯಭಾಗವಾಗಿ ಉಪಯೋಗಿಸಿ, ಪ್ರಶ್ನೆಗಳು 1-4 ನ್ನು ಉತ್ತರಿಸಿ.

- **ಮುಂದಕ್ಕೆ ನೋಡಿರಿ** – ನೀವು ಹೇಗೆ ವಿಧೇಯರಾಗುವಿರಿ, ತರಬೇತಿ ಕೊಡುವಿರಿ ಮತ್ತು ಹಂಚಿಕೊಳ್ಳುವಿರಿ ಎಂಬುದನ್ನು ವೃದ್ಧಿಪಡಿಸಲು ಪ್ರಶ್ನೆ **5, 6, 7** ನ್ನು ಉಪಯೋಗಿಸಿ.

**ನೆನಪಿಡಿ** – ಪ್ರತಿಯೊಂದು ಭಾಗವು ಸುಮಾರು ನಿಮ್ಮ ಅಭ್ಯಾಸ ಸಮಯದ **1/3** ರಷ್ಟು **(**ಅಥವಾ **30** ನಿಮಿಷಗಳು**)** ತೆಗೆದುಕೊಳ್ಳಬೇಕು.

## ಅಧಿವೇಶನ 08

ಈ ಅಧಿವೇಶನದಲ್ಲಿ, ನಾಯಕರ ಚಿಕ್ಕ ಗುಂಪುಗಳು ಜೀವನ ಪರ್ಯಂತದ ನಾಯಕರಾಗಲು ಸ್ವಲ್ಪ ಸಮಯದಲ್ಲೇ ಹಿಂಬಾಲಕರನ್ನು ಹೇಗೆ ಸಿದ್ಧಪಡಿಸುತ್ತವೆ ಎಂದು ನಾವು ಕಲಿಯುತ್ತೇವೆ. ನಾಯಕತ್ವಕ್ಕೆ ಇತರರ ಸೇವೆ ಮಾಡುವದು ಹೇಗೆ ಯೇಸುವಿನ ತಂತ್ರೋಪಾಯವೆಂದು ನಾವು ಕಲಿಯಬಹುದು. ಮತ್ತು ನಾವು ತಿರಿಗಿ 3/3 ಗುಂಪಾಗಿ ಅಭ್ಯಾಸಮಾಡುತ್ತಾ ಸಮಯವನ್ನು ಕಳೆಯುತ್ತೇವೆ.

### ನಾಯಕತ್ವದ ಚಿಕ್ಕ ಗುಂಪುಗಳು

ನಾಯಕತ್ವದ ಚಿಕ್ಕ ಗುಂಪುಗಳು 3/3 ರ ಗುಂಪುಗಳಾಗಿದ್ದು ಮಿತವಾದ ಮತ್ತು ಮೊದಲೇ ನಿರ್ಧರಿಸಿದ ಸಮಯಕ್ಕಾಗಿ ಮಾತ್ರ ಕೂಡುವದು [9-ಅಧಿವೇಶನದ ಜುಮ್ (ZÚME) ತರಬೇತಿ ಕೋರ್ಸ್ನ ಹಾಗೆ]. ಇದರ ಉದ್ದೇಶವೇನೆಂದರೆ ಒಂದು ಗುಂಪಿನ ಜನರು ಹೊರಗೆ ಹೋಗಿ ತಮ್ಮ ಸ್ವಂತ ಗುಂಪುಗಳನ್ನು ಆರಂಭಿಸಲು ಅಥವಾ ತರಬೇತಿ ಮುಗಿದ ನಂತರ ಮತ್ತೊಂದು ನಾಯಕತ್ವದ ಚಿಕ್ಕ ಗುಂಪನ್ನು ಆರಂಭಿಸಲು ತರಬೇತಿ ಕೊಡುವದೇ ಆಗಿದೆ.

ಈ ವಿಧಾನವನ್ನು ಅನೇಕ ಸಂದರ್ಭಗಳಲ್ಲಿ ಉಪಯೋಗಿಸಬಹುದು. ಇದನ್ನು ಅಲೆಮಾರಿಗಳು, ವಿದ್ಯಾರ್ಥಿಗಳು ಇತ್ಯಾದಿಗಳ ಮಧ್ಯೆ ಉಪಯೋಗಿಸಬಹುದು. ಈಗಾಗಲೇ ಕ್ರೈಸ್ತರಾಗಿರುವ ಜನರಿದ್ದರೆ ಆದರೆ ಕೆಲವು ಕಾರಣಗಳಿಂದ ಪ್ರಸ್ತುತ ಇರುವ ಗುಂಪಿಗೆ ಸೇರಲು ಸೂಕ್ತವಾಗದೆ ಇರಬಹುದು ಮತ್ತು ಅವರು ತಮ್ಮ ಸ್ವಂತ ಗುಂಪುಗಳನ್ನು ಪ್ರಾರಂಭಿಸಲು ತರಬೇತಿ ಅಗತ್ಯವಾಗಿರುವ ಕಡೆಗಳಲ್ಲಿ ಉಪಯೋಗಿಸಬಹುದು. ಒಂದೇ ಸಮಯದಲ್ಲಿ ನಂಬಿಕೆಗೆ ಬಂದಿರಬಹುದು ಮತ್ತು ದೊಡ್ಡ ಆಶೀರ್ವಾದದ ವಿಧಾನ ಅಥವಾ ಇದೇರೀತಿಯ ಕೆಲವು ವಿಧಾನಗಳಿಂದ ವೈಯಕ್ತಿಕವಾಗಿ ಅವರನ್ನು ಅನುಸರಿಸಲು ಸಾಕಷ್ಟು ಸಮಯ ಅಥವಾ ಅವಕಾಶ ಇಲ್ಲದೆ ಇರುವ ಪರಿಸ್ಥಿತಿಯಲ್ಲಿ ಇದನ್ನು ಉಪಯೋಗಿಸಬಹುದು.

### ತಿರಿಗಿ 3/3 ಗುಂಪುಗಳ ವ್ಯವಸ್ಥೆಯನ್ನು ಅಭ್ಯಾಸ ಮಾಡಿ

**ಚಟುವಟಿಕೆ (**90 ನಿಮಿಷಗಳು**) –** ಪುಟ 19-20 ರಲ್ಲಿರುವ 3/3 ಗುಂಪುಗಳ ವ್ಯವಸ್ಥೆಯ ಭಾಗದಲ್ಲಿರುವ ಮಾದರಿಯನ್ನು ಉಪಯೋಗಿಸಿ 3/3 ಗುಂಪುಗಳ ವ್ಯವಸ್ಥೆಯನ್ನು ಅಭ್ಯಾಸ ಮಾಡುತ್ತಾ ನಿಮ್ಮ ಗುಂಪು ಮುಂದಿನ 90 ನಿಮಿಷಗಳನ್ನು ಕಳೆಯಲಿ.

ಈ ಸಮಯದಲ್ಲಿ:

- **ಹಿಂದಕ್ಕೆ ನೋಡಿರಿ –** ಒಬ್ಬರಿಗೊಬ್ಬರು ಪರಿಶೀಲಿಸಿಕೊಳ್ಳಲು ಕಳೆದ ವಾರದ ವಿಧೇಯರಾಗಿ, ತರಬೇತಿ ಕೊಡಿ ಮತ್ತು ಹಂಚಿಕೊಳ್ಳಿರಿ ಅಧಿವೇಶನದ ಸವಾಲುಗಳನ್ನು ಉಪಯೋಗಿಸಿರಿ.
- **ಮೇಲಕ್ಕೆ ನೋಡಿರಿ –** ಅಪೊಸ್ತಲರ ಕೃತ್ಯಗಳು 2:42-47 ನ್ನು ನಿಮ್ಮ ಗುಂಪಿನ ಓದುವ ವಾಕ್ಯಭಾಗವಾಗಿ ಉಪಯೋಗಿಸಿ ಪ್ರಶ್ನೆಗಳು 1-4 ನ್ನು ಉತ್ತರಿಸಿ.
- **ಮುಂದಕ್ಕೆ ನೋಡಿರಿ –** ನೀವು ಹೇಗೆ ವಿಧೇಯರಾಗುವಿರಿ, ತರಬೇತಿ ಕೊಡುವಿರಿ ಮತ್ತು ಹಂಚಿಕೊಳ್ಳುವಿರಿ ಎಂಬುದನ್ನು ವೃದ್ಧಿಪಡಿಸಲು ಪ್ರಶ್ನೆ 5, 6, 7 ನ್ನು ಉಪಯೋಗಿಸಿ.

ಅಧಿವೇಶನದಾದ್ಯಂತ ನಿಮ್ಮ ಗುಂಪಿನಲ್ಲಿ ನಾಯಕತ್ವವನ್ನು ಹಸ್ತಾಂತರಿಸಿ, ಇದರಿಂದ ಪ್ರತಿಯೊಬ್ಬರಿಗೂ ನಡೆಸಲು, ಪ್ರಾರ್ಥಿಸಲು ಮತ್ತು

ಪ್ರಶ್ನೆಗಳನ್ನು ಕೇಳಲು ಅವಕಾಶ ದೊರಕುತ್ತದೆ. ನಡೆಯುತ್ತಿರುವ ಕಾರ್ಯವನ್ನು, ಸ್ವಲ್ಪ ಅಭ್ಯಾಸದಿಂದ ಒಳ್ಳೆಯದಾಗುತ್ತದೆಂದು ಮತ್ತು ಗುಂಪಿನಲ್ಲಿರುವ ಪ್ರತಿಯೊಬ್ಬ ಇನ್ನೂ ಹೆಚ್ಚಾಗಿ ಬೆಳೆಯಲು ಯಾವ ಮುಂದಿನ ಹೆಜ್ಜೆಯು ಒಳ್ಳೆಯದಾಗಿರುತ್ತದೆ ಎಂದು ತಿಳಿಯಲು ಉತ್ತೇಜಿಸಿ ಮತ್ತು ತರಬೇತಿ ಕೊಡಿ.

**ನೆನಪಿಡಿ –** ಪ್ರತಿಯೊಂದು ಭಾಗವು ಸುಮಾರು ನಿಮ್ಮ ಅಭ್ಯಾಸ ಸಮಯದ **1/3** ರಷ್ಟು [ಅಥವಾ **30** ನಿಮಿಷಗಳು] ತೆಗೆದುಕೊಳ್ಳಬೇಕು.

## ಅಧಿವೇಶನ 09

ಈ ಅಧಿವೇಶನದಲ್ಲಿ ರೇಖೀಯ ಮಾದರಿಗಳು ದೇವರ ರಾಜ್ಯದ ಬೆಳವಣಿಗೆಯನ್ನು ಅಡ್ಡಿಪಡಿಸುತ್ತದೆ ಎಂದು ಮತ್ತು ಶಿಷ್ಯರನ್ನು ಹೆಚ್ಚಾಗಿ ಮಾಡಲು ಅನುಕ್ರಮವಿಲ್ಲದ ಆಲೋಚನೆಯು ಹೇಗೆ ಸಹಾಯಮಾಡುತ್ತದೆ ಎಂದು ನಾವು ಕಲಿಯುತ್ತೇವೆ. ಶಿಷ್ಯರನ್ನಾಗಿ ಮಾಡಲು ಸಮಯವು ಎಷ್ಟು ಪ್ರಾಮುಖ್ಯವೆಂದು ಮತ್ತು ನಮ್ಮ ವೇಗವನ್ನು ಹೇಗೆ ತ್ವರಿತಗೊಳಿಸಬೇಕೆಂದು ನಾವು ಕಂಡುಕೊಳ್ಳುತ್ತೇವೆ. ನಂಬಿಗಸ್ತ, ಆತ್ಮಿಕ ಕುಟುಂಬಗಳನ್ನು ಪಟ್ಟಣದಾದ್ಯಂತ ಬೆಳೆಯುತ್ತಿರುವ ವಿಶ್ವಾಸಿಗಳ ದೇಹವಾಗಿ ಮಾರ್ಪಡಿಸಲು ಹೇಗೆ ಸಹಾಯ ಮಾಡುತ್ತದೆ ಎಂದು ಯೇಸುವಿನ ಹಿಂಬಾಲಕರು ಎರಡು ಸಭೆಗಳ ಭಾಗವಾಗಿರಬಹುದೆಂದು ನಾವು ಕಲಿಯುತ್ತೇವೆ. ಅಂತಿಮವಾಗಿ, ದೇವರ ಕುಟುಂಬವನ್ನು ವಿಸ್ಮಯಕಾರಿಯಾಗಿ ಬೆಳೆಸುವಲ್ಲಿ ಸರಳವಾದ 3-ತಿಂಗಳ ಯೋಜನೆಯು ನಿಮ್ಮ ಪ್ರಯತ್ನಗಳನ್ನು ಹೇಗೆ ಕೇಂದ್ರಿಕರಿಸುತ್ತದೆ ಮತ್ತು ನಿಮ್ಮ ಪ್ರವೀಣತೆಯನ್ನು ಹೆಚ್ಚಿಸುತ್ತದೆ ಎಂದು ನಾವು ಕಲಿತುಕೊಳ್ಳುತ್ತೇವೆ.

### 3-ತಿಂಗಳ ಯೋಜನೆ

ಈಗ ನಿಮಗೆ ಶಿಷ್ಯರನ್ನಾಗಿ ಮಾಡುವ ಕೆಲವು ಮೂಲ ಸಾಧನಗಳನ್ನು ಪರಿಚಯಮಾಡಲಾಗಿದೆ, ಪ್ರಾರ್ಥನೆ ಮಾಡುತ್ತಾ ಮುಂದಿನ 3-ತಿಂಗಳ ನೀವು ನಿರ್ಧಿಷ್ಟವಾಗಿ ಏನು ಮಾಡಬೇಕೆಂದು ಆತನು ಬಯಸುತ್ತಾನೆಂದು ಕೇಳುತ್ತಾ ಸ್ವಲ್ಪ ಸಮಯವನ್ನು ಕಳೆಯಿರಿ. ನೀವು ಆತನಿಗೆ ಕಿವಿಗೊಡುತ್ತಾ ಸಮಯವನ್ನು ಕಳೆದ ನಂತರ ಈ ಕೆಳಗಿನ ಯೋಜನೆಯ್ನು ಅನುಸರಿಸಲು ಪೂರ್ಣಗೊಳಿಸಿ. ನಿಮ್ಮ ಯೋಜನೆಯನ್ನು ನಿಮ್ಮ ತರಬೇತಿಯ ಜೊತೆಗಾರರೊಂದಿಗೆ ಹಂಚಿಕೊಳ್ಳಿರಿ ಮತ್ತು ನೀವು ಈ ಸಮಯದಿಂದ ಪರಸ್ಪರ ಪರಿಶೀಲಿಸುವಾಗ 1, 2, 3, 4, 6, 8 ಮತ್ತು 12 ವಾರಗಳ ಲೆಕ್ಕ ಒಪ್ಪಿಸಬೇಕಾದ ವೇಳಾಪಟ್ಟಿಯನ್ನು ಗೊತ್ತುಪಡಿಸಿ.

ನನ್ನ ಕಥೆಯನ್ನು [ಸಾಕ್ಷಿ] ಮತ್ತು ದೇವರ ಕಥೆಯನ್ನು [ಸುವಾರ್ತೆ] ಈ ಕೆಳಗಿನ ವ್ಯಕ್ತಿಗಳೊಂದಿಗೆ ಹಂಚಿಕೊಳ್ಳುತ್ತೇನೆ:

ನನ್ನೊಂದಿಗೆ ಲೆಕ್ಕ ಒಪ್ಪಿಸಬೇಕಾದ ಗುಂಪನ್ನು ಆರಂಭಿಸಲು ನಾನು ಈ ಕೆಳಗಿನ ಜನರನ್ನು ಆಮಂತ್ರಿಸುತ್ತೇನೆ:

ತಮ್ಮ ಸ್ವಂತ ಲೆಕ್ಕ ಒಪ್ಪಿಸಬೇಕಾದ ಗುಂಪುಗಳನ್ನು ಆರಂಭಿಸಲು ಮತ್ತು ಅವರಿಗೆ ತರಬೇತಿ ಕೊಡಲು ನಾನು ಈ ಕೆಳಗಿನ ಜನರಿಗೆ ಸವಾಲು ಹಾಕುತ್ತೇನೆ:

ನನ್ನೊಂದಿಗೆ 3/3 ಗುಂಪನ್ನು ಆರಂಭಿಸಲು ನಾನು ಈ ಕೆಳಗಿನ ಜನರನ್ನು ಆಮಂತ್ರಿಸುತ್ತೇನೆ:

ತಮ್ಮ ಸ್ವಂತ 3/3 ಗುಂಪುಗಳನ್ನು ಆರಂಭಿಸಲು ಮತ್ತು ಅವರಿಗೆ ತರಬೇತಿ ಕೊಡಲು ನಾನು ಈ ಕೆಳಗಿನ ಜನರಿಗೆ ಸವಾಲು ಹಾಕುತ್ತೇನೆ:

3/3 ನಿರೀಕ್ಷೆಯ ಅಥವಾ ಅನ್ವೇಷಣೆಯ ಗುಂಪಿನಲ್ಲಿ ಭಾಗವಹಿಸಲು ನಾನು ಈ ಕೆಳಗಿನ ಜನರನ್ನು ಆಮಂತ್ರಿಸುತ್ತೇನೆ [ಅನುಬಂಧವನ್ನು ನೋಡಿರಿ]:

ನನ್ನೊಂದಿಗೆ ಪ್ರಾರ್ಥನೆಯ ನಡಿಗೆಯಲ್ಲಿ ಭಾಗವಹಿಸಲು ಈ ಕೆಳಗಿನ ಜನರನ್ನು ಆಮಂತ್ರಿಸುತ್ತೇನೆ:

ಅವರ ಕಥೆಯನ್ನು ಮತ್ತು ದೇವರ ಕಥೆಯನ್ನು ಹಂಚಿಕೊಳ್ಳಲು ಮತ್ತು ತಮ್ಮ ಸಂಬಂಧಿಕರಲ್ಲಿ 100 ಜನರ ಪಟ್ಟಿಯನ್ನು ಮಾಡಲು ನಾನು ಈ ಕೆಳಗಿನ ಜನರನ್ನು ತರಬೇತಿಗೊಳಿಸುತ್ತೇನೆ:

ಪ್ರಾರ್ಥನಾ ಕಾಲಚಕ್ರದ ಸಾಧನವನ್ನು ನಿಯತಕಾಲಿಕ ಆಧಾರದ ಮೇಲೆ ಉಪಯೋಗಿಸಲು ನಾನು ಈ ಕೆಳಗಿನ ಜನರಿಗೆ ಸವಾಲು ಹಾಕುತ್ತೇನೆ:

ನಾನು ಪ್ರಾರ್ಥನಾ ಕಾಲಚಕ್ರದ ಸಾಧನವನ್ನು ಪ್ರತಿ ______________________ [ದಿನಗಳು/ವಾರಗಳು/ತಿಂಗಳು] ಉಪಯೋಗಿಸುತ್ತೆನೆ.

ನಾನು ಪ್ರಾರ್ಥನಾ ನಡಿಗೆಯನ್ನು ಪ್ರತಿ ________________________ [ದಿನಗಳು/ವಾರಗಳು/ತಿಂಗಳು] ಮಾಡುತ್ತೆನೆ.

ನಾನು ನಡೆಸುವ ನಾಯಕತ್ವದ ಚಿಕ್ಕ ಗುಂಪಿನ ಭಾಗವಾಗಿರಲು ಈ ಕೆಳಗಿನ ಜನರನ್ನು ನಾನು ಆಮಂತ್ರಿಸುತ್ತೇನೆ:

ಈ ಜುಮ್ (ZÚME) ತರಬೇತಿಯನ್ನು ಹೊಂದಿಕೊಳ್ಳಲು ಈ ಕೆಳಗಿನ ಜನರಿಗೆ ನಾನು ಉತ್ತೇಜಿಸುತ್ತೇನೆ:

ಇತರೆ ಸಮರ್ಪಣೆಗಳು:

# ಮುಂದುವರೆದ ತರಬೇತಿ

## ಅಧಿವೇಶನ 10

ಈ ಮುಂದುವರೆದ ತರಬೇತಿಯ ಅಧಿವೇಶನದಲ್ಲಿ, ಸಂಕ್ಷಿಪ್ತ ಪರಿಶೀಲನಾಪಟ್ಟಿ ಮೌಲ್ಯಮಾಪನದಿಂದ ನಮ್ಮ ತರಬೇತಿ ಬಲಗಳನ್ನು ಹೇಗೆ ಸರಿಸಮ ಮಾಡಬಹುದೆಂದು ನೋಡುತ್ತೇವೆ. ಇನ್ನು ಹೆಚ್ಚಾಗಿ ಸಾಧಿಸಲು ಒಟ್ಟಾಗಿ ಕೆಲಸ ಮಾಡುವದಕ್ಕಾಗಿ ಚಿಕ್ಕ ಸಭೆಯ ಗುಂಪನ್ನು ಬೆಳೆಸಲು ಜಾಲಗಳಲ್ಲಿ ನಾಯಕತ್ವವು ಹೇಗೆ ನಡೆಸುತ್ತವೆ ಎಂದು ನಾವು ಕಲಿಯುತ್ತೇವೆ. ಮತ್ತು ಹೊಸ ಹಂತದ ಬೆಳವಣಿಗೆಗೆ ನಾಯಕರನ್ನು ನಡೆಸುವ ಜೊತೆಗಾರರ ತರಬೇತಿ ಗುಂಪುಗಳನ್ನು ಹೇಗೆ ಅಭಿವೃದ್ಧಿಪಡಿಸಬೇಕೆಂದು ನಾವು ಕಲಿಯುತ್ತೇವೆ.

### ತರಬೇತಿ ಪರಿಶೀಲನಾಪಟ್ಟಿ

ಹೆಚ್ಚಿಸುವ ಶಿಷ್ಯರನ್ನು ಮಾಡುವ ವಿಷಯಕ್ಕೆ ಬಂದಾಗ ನಿಮ್ಮ ಸ್ವಂತ ಬಲಗಳನ್ನು ಮತ್ತು ದುರ್ಬಲತೆಗಳನ್ನು ಬೇಗನೆ ಗೊತ್ತುಮಾಡಲು ನೀವು ಬಲವುಳ್ಳ ಸಾಧನವಾದ ಪರಿಶೀಲನಾಪಟ್ಟಿಯನ್ನು ಉಪಯೋಗಿಸಬಹುದು. ಇತರರಿಗೆ ಸಹಾಯಮಾಡಲು ಇದು ಸಹ ಒಂದು ಬಲವುಳ್ಳ ಸಾಧನವಾಗಿದೆ – ಮತ್ತು ನಿಮಗೆ ಸಹಾಯಮಾಡಲು ಇತರರು ಇದನ್ನು ಉಪಯೋಗಿಸಬಹುದು.

ಈ ಸಂಕ್ಷಿಪ್ತ [5 ನಿಮಿಷಗಳು ಅಥವಾ ಕಡಿಮೆ] ಸ್ವ-ಪರಿಶೀಲನೆಯನ್ನು ಮಾಡಲು ಈ ಕೆಳಗಿನ ಹೆಜ್ಜೆಗಳನ್ನು ಅನುಸರಿಸಿ:

- ಹೆಜ್ಜೆ 1 – ಪರಿಶೀಲನಾಪಟ್ಟಿಯ ಎಡಭಾಗದಲ್ಲಿರುವ ಶಿಷ್ಯರ ತರಬೇತಿ ಸಾಧನಗಳನ್ನು ಓದಿರಿ.

- ಹೆಜ್ಜೆ 2 – ಈ ಕೆಳಗಿನ ವಿಧಾನವನ್ನು ಉಪಯೋಗಿಸಿ ತರಬೇತಿಯ ಪ್ರತಿಯೊಂದು ಸಾಧನವನ್ನು ಗುರುತಿಸಿ:
  - ನಿಮಗೆ ಈ ಸಾಧನದ ಪರಿಚಯ ಇಲ್ಲದಿದ್ದರೆ ಅಥವಾ ಅರ್ಥಮಾಡಿಕೊಳ್ಳಲು ಆಗದಿದ್ದರೆ – ಕಪ್ಪು ಕಾಲಮ್ ಪರಿಶೀಲಿಸಿ.
  - ನಿಮಗೆ ಸಾಧನವನ್ನು ಕುರಿತು ಸ್ವಲ್ಪ ಪರಿಚಿತಿವಾಗಿದ್ದು ಆದರೆ ಇನ್ನು ಖಚಿತವಲ್ಲದಿದ್ದರೆ – ಕೆಂಪು ಕಾಲಮ್ ಪರಿಶೀಲಿಸಿ.
  - ನಿಮಗೆ ಸಾಧನವು ಅರ್ಥವಾಗಿದ್ದು ಅದರ ಮೂಲಾಂಶಗಳನ್ನು ಕುರಿತು ತರಬೇತಿ ಕೊಡಬಹುದಾದರೆ – ಹಳದಿ ಕಾಲಮ್ ಪರಿಶೀಲಿಸಿ.
  - ನೀವು ದೃಢವಿಶ್ವಾಸವುಳ್ಳವರಾಗಿದ್ದು ಈ ಸಾಧನವನ್ನು ಪರಿಣಾಮಕಾರಿಯಾಗಿ ತರಬೇತಿ ಕೊಡಬಹುದಾದರೆ – ಹಸಿರು ಕಾಲಮ್ ಪರಿಶೀಲಿಸಿ.

**ನೆನಪಿಡಿ –** ನಿಮ್ಮ ಜುಮ್ ತರಬೇತುದಾರರೊಂದಿಗೆ ಮತ್ತು/ಅಥವಾ ನಿಮ್ಮ ತರಬೇತಿ ಸಹಪಾಠಿಯೊಂದಿಗೆ ಅಥವಾ ಇತರೆ ತರಬೇತುಗಾರರೊಂದಿಗೆ ನಿಮ್ಮ ತರಬೇತಿ ಪರಿಶೀಲನಾಪಟ್ಟಿಯ ಫಲಿತಾಂಶಗಳನ್ನು ಹಂಚಿಕೊಳ್ಳಲು ಖಚಿತಪಡಿಸಿಕೊಳ್ಳಿರಿ. ಒಂದುವೇಳೆ ನೀವು ತರಬೇತುಗಾರರಿಗೆ ಸಹಾಯಮಾಡುತ್ತಿದ್ದರೆ ಅಥವಾ ಬೇರೆ ಯಾರಿಗಾದರೂ ತರಬೇತಿ ಕೊಡುತ್ತಿದ್ದರೆ, ಯಾವ ಭಾಗಗಳಲ್ಲಿ ನಿಮ್ಮ ಗಮನ ಮತ್ತು ತರಬೇತಿ ಅಗತ್ಯವಿದೆ ಎಂದು ನಿರ್ಧರಿಸಲು ಸಹಾಯಮಾಡುವದಕ್ಕಾಗಿ ಈ ಸಾಧನವನ್ನು ಹಂಚಿಕೊಳ್ಳಿರಿ.

# ತರಬೇತಿ ಪರಿಶೀಲನಾಪಟ್ಟಿ

ಕಪ್ಪು: ಹೊಸ ಮಾಹಿತಿಯಿಂದ ತರಬೇತಿ ಕೊಡಿರಿ ಮತ್ತು ಳಿದುಕೊಳ್ಳುತ್ತಿದ್ದಾರೆಂದು ಖಚಿತಪಡಿಸಿಕೊಳ್ಳಿರಿ.

ಕೆಂಪು: ಅವರು ಮೂಲಗಳನ್ನು ಹೊಂದಿಕೊಳ್ಳುವವರಿಗೆ ನಿಲ್ಲಿಸಿ ಅವರೊಂದಿಗಿರ್ರಿ.

ಹಳದಿ: ಸತತವಾದ ಸಾಮರ್ಥ್ಯಕ್ಕಾಗಿ ವೀಕ್ಷಿಸಿ ಮುಂದೆ ಹೋಗಿ ಅವರನ್ನು ಬಿಡಿರಿ

ಹಸಿರು: ಮತ್ತು ಅಭಿವೃದ್ಧಿಪಡಿಸಲು ಇತರರನ್ನು ಕಂಡುಕೊಳ್ಳಿರಿ

| | ಮಾದರಿ | ಸಹಾಯ | ವೀಕ್ಷಿಸಿ | ಬಿಟ್ಟುಬಿಡಿ |
|---|---|---|---|---|
| | ತಿಳಿದಿಲ್ಲ | ಕೌಶಲ್ಯವಿಲ್ಲದ | ಸ್ವರ್ಧಾತ್ಮಕ | ಕೌಶಲ್ಯವುಳ್ಳ |
| | ಆಪ್ತ ಸಲಹೆಗಾರ | | | |
| | ಮಾರ್ಗದರ್ಶನ ಮತ್ತು ಮಾಹಿತಿ ಕೊಡುವನು | ಆಪ್ತ ಸಲಹೆಗಾರನು ಮಾರ್ಗದರ್ಶನ ಮತ್ತು ಸಹಾಯ ಮಾಡುವನು | ಆಪ್ತ ಸಲಹೆಗಾರನು ಮಾರ್ಗದರ್ಶನ ಮತ್ತು ಉತ್ತೇನ ಕೊಡವನು | ಆಪ್ತ ಸಲಹೆಗಾರನು ನವೀಕರಣಗಳಪಡೆಯುವನು |
| | ಯೋಜನೆಗಳನ್ನು ಹೇಗೆ ಮಾಡಲಾಗುವದು | | | |
| **ತರಬೇತಿ ಸಾಧನ** | ಆಪ್ತ ಸಲಹೆಗಾರನು ತೀರ್ಮಾನಿಸುವನು | ಆಪ್ತ ಸಲಹೆಗಾರನು ಚರ್ಚಿಸುವನು ಮತ್ತು ತೀರ್ಮಾನಿಸುವನು | ಆಪ್ತ ಸಲಹೆಗಾರನು ಚರ್ಚಿಸುವನು ಮತ್ತು ಸಲಹೆ ಪಡೆದುಕೊಳ್ಳುವವನು ತೀರ್ಮಾನಿಸುವನು | ಸಲಹೆ ಪಡೆದುಕೊಳ್ಳುವವನು ತೀರ್ಮಾನಿಸುವನು |
| ಮರಿ ಬಾತುಕೋಳಿ ಶಿಷ್ಯತ್ವ | | | | |
| ನಿಮ್ಮ ಕಥೆಯನ್ನು ಹೇಳಿ [ಸಾಕ್ಷಿ] | | | | |
| ದೇವರ ಕಥೆಯನ್ನು ಹೇಳಿ [ಸುವಾರ್ತೆ] | | | | |
| ಸಂಬಂಧಗಳ ಮನೆವಾರ್ತೆಗಾರ – 100 ಮಂದಿಯ ಪಟ್ಟಿ | | | | |
| ವೇಗ | | | | |
| ಅನುಕ್ರಮವಿಲ್ಲದ ಸೇವೆ | | | | |
| 3/3 ಗುಂಪುಗಳ ವ್ಯವಸ್ಥೆ | | | | |
| ಸರಳ ಸಭೆ - ದೇವರನ್ನು/ಇತರರನ್ನು ಪ್ರೀತಿಸಿ, ಶಿಷ್ಯರನ್ನು ಮಾಡಿ | | | | |
| ಎರಡು ಸಭೆಗಳ ಭಾಗವಾಗಿರುವದು | | | | |
| ತರಬೇತಿ ಕಾಲಚಕ್ರ | | | | |
| ಲೆಕ್ಕ ಒಪ್ಪಿಸಬೇಕಾದ ಗುಂಪುಗಳು | | | | |
| ಸ್ವ-ಪೋಷಣೆ: | | | | |
| • ವಾಕ್ಯವನ್ನು ದಿನನಿತ್ಯ ಓದುವದು [ವಿಧೇಯರಾಗಿ] | | | | |
| • ಪ್ರಾರ್ಥನೆ – ಮಾತನಾಡಿ ಮತ್ತು ಕಿವಿಗೊಡಿ [ಪ್ರಾರ್ಥನೆ ಕಾಲಚಕ್ರ] | | | | |
| • ದೈಹಿಕ ಜೀವನ - ಅನ್ಯೋನ್ಯತೆ [ಮತ್ತೊಬ್ಬರ] | | | | |
| • ಹಿಂಸೆ ಮತ್ತು ಬಾಧೆ | | | | |
| ದೇವರರಾಜ್ಯವು ಎಲ್ಲಿ ಇಲ್ಲವೆಂದು ನೋಡಲು ಕಣ್ಣುಗಳು | | | | |
| ಸಮಾಧಾನ ವ್ಯಕ್ತಿಯನ್ನು ಕಂಡುಕೊಳ್ಳಿರಿ [ಮತ್ತಾ 10 ಲೂಕ 10] | | | | |
| ಪ್ರಾರ್ಥನಾ ನಡಿಗೆ | | | | |
| ಸಭೆಯಾಗಿರುವುದು: | | | | |

| | | | | |
|---|---|---|---|---|
| • ಅನ್ಯೋನ್ಯತೆ [ಒಟ್ಟಾಗಿ ಊಟಮಾಡಿರಿ, ಒಬ್ಬರಿಗೊಬ್ಬರು] | | | | |
| • ಸ್ತುತಿ ಮತ್ತು ಆರಾಧನೆ | | | | |
| • ಸತ್ಯವೇದ [ವಿಧೇಯರಾಗಿ, ತರಬೇತಿ ಕೊಡಿ] | | | | |
| • ಜನರಿಗೆ ಯೇಸುವನ್ನು ಕುರಿತು ಹೇಳುವದು [ಹಂಚಿಕೊಳ್ಳಿರಿ] | | | | |
| • ದೀಕ್ಷಾಸ್ನಾನ | | | | |

## ಆಪ್ತ ಸಲಹೆಗಾರರ ಗುಂಪುಗಳು

ಯೇಸು ಹೇಳಿದ್ದು – "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನೆಂದರೆ ನೀವು ಒಬ್ಬರನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನೊಬ್ಬರು ಪ್ರೀತಿಸಬೇಕು ಎಂಬದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿ ಇದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳಿದುಕೊಳ್ಳುವರು."

ಆಪ್ತ ಸಲಹೆಗಾರರ ಗುಂಪು 3/3 ಗುಂಪುಗಳನ್ನು ನಡೆಸುವ ಮತ್ತು ಆರಂಭಿಸುವ ಜನರನ್ನು ಒಳಗೊಂಡಿದೆ. ಇದು 3/3 ವ್ಯವಸ್ಥೆಯನ್ನು ಅನುಸರಿಸುತ್ತದೆ ಮತ್ತು ನಿಮ್ಮ ಕ್ಷೇತ್ರದಲ್ಲಿರುವ ದೇವರ ಕೆಲಸದ ಆತ್ಮಿಕ ಆರೋಗ್ಯವನ್ನು ನಿರ್ಧರಿಸಲು ಬಲವುಳ್ಳ ರೀತಿಯಾಗಿದೆ.

ಆಪ್ತ ಸಲಹೆಗಾರರ ಗುಂಪು ಯೇಸುವನ್ನು ಹಿಂಬಾಲಿಸುವ ವ್ಯಕ್ತಿಯೊಂದಿಗೆ, ಸರಳ ಸಭೆಗಳೊಂದಿಗೆ, ಸೇವಾ ಸಂಸ್ಥೆಗಳೊಂದಿಗೆ ಅಥವಾ ಲೋಕವನ್ನು ಸಂಧಿಸುವ ಜಾಗತಿಕ ಸರಳ ಸಭೆಯ ಜಾಲದೊಂದಿಗೆ ನಾಯಕರಿಂದ–ನಾಯಕರಿಗೆ ತರಬೇತಿಯನ್ನು ಉಪಯೋಗಿಸುತ್ತದೆ,

ಸೇವೆಗಾಗಿ ಯೇಸುವಿನ ತಂತ್ರೋಪಾಯವನ್ನು ಅನುಸರಿಸುವ ಉದ್ದೇಶ ಸೂಚಕಗಳನ್ನು ಜೊತೆಗಾರರ ತರಬೇತಿ ಗುಂಪಿನಲ್ಲಿ ಭಾಗವಹಿಸುವವರು ನೋಡುವರು ಮತ್ತು ಪ್ರಶ್ನೆಗಳನ್ನು ಕೇಳುವರು ಮತ್ತು ಪ್ರತಿಕ್ರಿಯೆಗಳನ್ನು ಕೊಡುವರು. ಈ ಅಧಿವೇಶನಗಳು ಯಾರ ಅಹಂಭಾವವನ್ನು ಕುಗ್ಗಿಸಲು ಅಥವಾ ಯಾರನ್ನಾದರೂ ಕೀಳಾಗಿ ನೋಡಲು ಉದ್ಧೇಶಿಸಲಾಗಿಲ್ಲ. ಇವು ಬೋಧಿಸಲು ಮತ್ತು ಸ್ಫೂರ್ತಿಯನ್ನು ಕೊಡಲು ಉದ್ಧೇಶಿಸಲಾಗಿದೆ.

ಈ ಸರಳವಾದ ಮಾದರಿಯನ್ನು ಉಪಯೋಗಿಸಿ:

**ಹಿಂದಕ್ಕೆ ನೋಡಿರಿ** [ನಿಮ್ಮ ಸಮಯದ **1/3** ಭಾಗ]

ಮೂರನೆಯ ಒಂದು ಭಾಗದ ಸಮಯದಲ್ಲಿ - ನೀವು ಮೂಲ **3/3** ಗುಂಪಿನಲ್ಲಿರುವಾಗ ಮಾಡಿದಂತೆ ಆರೈಕೆ ಮತ್ತು ಪ್ರಾರ್ಥನೆಯಲ್ಲಿ ಸಮಯವನ್ನು ಕಳೆಯಿರಿ. ನಂತರ ಹಿಂದಿನ ಸಮರ್ಪಣೆಗಳಲ್ಲಿ ಗುಂಪಿನ ದರ್ಶನ ಮತ್ತು ನಂಬಿಗಸ್ತಿಕೆಯನ್ನು ನೋಡುತ್ತಾ ಸಮಯವನ್ನು ಕಳೆಯಿರಿ:

ನೀವು ಕ್ರಿಸ್ತನಲ್ಲಿ ಹೇಗೆ ನೆಲೆಗೊಂಡಿದ್ದೀರಿ**? [**ವಾಕ್ಯ**,** ಪ್ರಾರ್ಥನೆ**,** ನಂಬಿಕೆ**,** ವಿಧೇಯತ್ವ**,** ಮುಖ್ಯ ಸಂಬಂಧಗಳು**?]** ಕಳೆದ ಅಧಿವೇಶನದಿಂದ ನಿಮ್ಮ ಗುಂಪು ನಿಮ್ಮ ಕಾರ್ಯಗತ ಯೋಜನೆಗಳನ್ನು ಪೂರ್ಣಗೊಳಿಸಿತೋ**?** ಅವುಗಳನ್ನು ಪುನರಾವಲೋಕನ ಮಾಡಿರಿ.

**ಮೇಲಕ್ಕೆ ನೋಡಿರಿ** [ನಿಮ್ಮ ಸಮಯದ **1/3** ಭಾಗ]

ಗುಂಪು ಈ ಕೆಳಗಿನ ಸರಳ ಪ್ರಶ್ನೆಗಳನ್ನು ಚರ್ಚಿಸುವಂತೆ ನಡೆಸಿರಿ:

1. ನಾಲ್ಕು ಕ್ಷೇತ್ರಗಳ ಚಿತ್ರದ ಪ್ರತಿಯೊಂದು ಭಾಗದಲ್ಲಿ ನೀವು ಹೇಗೆ ಕಾರ್ಯಮಾಡುತ್ತಿದ್ದೀರಿ**?**
2. ಯಾವುದು ಚೆನ್ನಾಗಿ ಕೆಲಸಮಾಡುತ್ತಿದೆ**?** ನಿಮ್ಮ ದೊಡ್ಡ ಸವಾಲುಗಳು ಯಾವುವು**?**
3. ನಿಮ್ಮ ಪ್ರಸ್ತುತ ತಲೆಮಾರು ನಕ್ಷೆಯನ್ನು ವಿಮರ್ಶಿಸಿ
4. ನಿಮಗೆ ಯಾವುದು ಸವಾಲಾಗಿತ್ತು ಅಥವಾ ಅರ್ಥಮಾಡಿಕೊಳ್ಳಲು ಕಷ್ಟಕರವಾಗಿತ್ತು**?**
5. ಇತ್ತೀಚೆಗೆ ದೇವರು ನಿಮಗೆ ಏನನ್ನು ತೋರಿಸುತ್ತಿದ್ದಾನೆ**?**
6. ಇತರೆ ಸದಸ್ಯರಿಂದ ಅಥವಾ ಪರಿಣಿತ ನಾಯಕರಿಂದ ಯಾವುದಾದರೂ ಪ್ರಶ್ನೆಗಳುಂಟೋ**?**

**ಮುಂದಕ್ಕೆ ನೋಡಿರಿ** [ನಿಮ್ಮ ಸಮಯದ **1/3** ಭಾಗ]

ಈ ಪ್ರಶ್ನೆಗಳಿಗೆ ಹೇಗೆ ಉತ್ತರಿಸಬೇಕೆಂದು ಅವರಿಗೆ ತೋರಿಸಲು ಪವಿತ್ರಾತ್ಮನಿಗಾಗಿ ಗುಂಪಿನಲ್ಲಿ ಪ್ರತಿಯೊಬ್ಬರು ಮೌನವಾಗಿ ಪ್ರಾರ್ಥಿಸುತ್ತಾ ಸಮಯವನ್ನು ಕಳೆಯಿರಿ:

7. ನಾವು ಮುಂದಿನ ಸಾರಿ ಒಟ್ಟಾಗಿ ಸೇರುವದಕ್ಕಿಂತ ಮುಂಚಿತವಾಗಿ ನಾನು ಅಭ್ಯಾಸ ಮಾಡಬೇಕೆಂದು ದೇವರು ಬಯಸುವ ಕಾರ್ಯಗತ ಯೋಜನೆಗಳು ಅಥವಾ ಗುರಿಗಳು ಯಾವುವು**?** **[**ನಿಮ್ಮ ಕೆಲಸವನ್ನು ಕೇಂದ್ರಿಕರಿಸಲು ಸಹಾಯಮಾಡುವದಕ್ಕಾಗಿ ನಾಲ್ಕು ಕ್ಷೇತ್ರಗಳ ಸಾಧನವನ್ನು ಉಪಯೋಗಿಸಿ]
8. ನನ್ನ ತರಬೇತುಗಾರನು ಅಥವಾ ಇತರೆ ಗುಂಪಿನ ಸದಸ್ಯರು ಈ ಕೆಲಸದಲ್ಲಿ ನನಗೆ ಹೇಗೆ ಸಹಾಯಮಾಡಬಹುದು**?**


ಅಂತಿಮವಾಗಿ ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತನಾಡುತ್ತಾ ಗುಂಪಾಗಿ ಸಮಯ ಕಳೆಯಿರಿ.

ಗುಂಪಾಗಿ ಪ್ರಾರ್ಥಿಸುವಂತೆ ನಡೆಸಿರಿ ಇದರಿಂದ ತಮ್ಮ ಬಿಡುವಿನ ಸಮಯದಲ್ಲಿ ಇತರರನ್ನು ಸಂಧಿಸುವ ಆ ಎಲ್ಲಾ ಗುಂಪಿನವರ ಹೃದಯವನ್ನು ಸಿದ್ಧಪಡಿಸಲು ಪ್ರತಿಯೊಬ್ಬ ಸದಸ್ಯರು ಪ್ರಾರ್ಥಿಸಿ ದೇವರನ್ನು ಬೇಡಿಕೊಳ್ಳಲಿ.

ದೇವರು ಈ ಅಧಿವೇಶನದಲ್ಲಿ ಕಲಿಸಿದವುಗಳನ್ನು ಅನ್ವಯಿಸಿ ವಿಧೇಯರಾಗಲು ಗುಂಪಿನ ಪ್ರತಿಯೊಬ್ಬ ಸದಸ್ಯನಿಗೆ ಧೈರ್ಯ ಮತ್ತು ಬಲವನ್ನು ಕೊಡುವಂತೆ ದೇವರನ್ನು ಬೇಡಿಕೊಳ್ಳಿರಿ. ಹಿರಿಯ ನಾಯಕರು ಕಿರಿಯ ನಾಯಕರಿಗಾಗಿ ವಿಶೇಷವಾಗಿ ಪ್ರಾರ್ಥಿಸಬೇಕಾದ ಅಗತ್ಯವಿದ್ದರೆ**,** ಆ ಪ್ರಾರ್ಥನೆಗಾಗಿ ಇದೇ ಸೂಕ್ತ ಸಮಯವಾಗಿದೆ.

ಈ ಗುಂಪು ಬೇರೆ ಬೇರೆ ಸ್ಥಳಗಳಲ್ಲಿ ಅನೇಕವೇಳೆ ಸೇರುವದರಿಂದ**,** ನೀವು ಕರ್ತನ ಭೋಜನವನ್ನು ಆಚರಿಸಲು ಅಥವಾ ಊಟ ಮಾಡಲು ಸಾಧ್ಯವಾಗದೆ ಇರಬಹುದು**,** ಆದರೆ ಆರೋಗ್ಯ**,** ಕುಟುಂಬ ಮತ್ತು ಸ್ನೇಹಿತರನ್ನು ಕುರಿತು ತಿಳಿದುಕೊಳ್ಳಲು ಸಮಯವನ್ನು ತೆಗೆದುಕೊಳ್ಳಲು ಖಚಿತಪಡಿಸಿಕೊಳ್ಳಿರಿ.

**ನಾಲ್ಕು ಕ್ಷೇತ್ರಗಳ ವಿಶ್ಲೇಷಣಾತ್ಮಕ ರೇಖಾಚಿತ್ರ**




**ಹೆಚ್ಚಿಸುವ ಕ್ಷೇತ್ರ:** ಪುನರುತ್ಪತ್ತಿಯಾಗಿ ನೀವು ಯಾರೊಂದಿಗೆ**,** ಹೇಗೆ ಮತ್ತು ಯಾವಾಗ ನಂಬಿಗಸ್ತ ಜನರನ್ನು ಹುಡುಕುತ್ತಿದ್ದೀರಿ ಮತ್ತು ಅವರನ್ನು ತರಬೇತಿಗೊಳಿಸುತ್ತಿದ್ದೀರಿ ಮತ್ತು ಅವರನ್ನು ಹೊಣೆಗಾರರನ್ನಾಗಿ ಮಾಡುತ್ತಿದ್ದೀರಿ**?**


**ಬರಿದಾದ ಕ್ಷೇತ್ರ:** ನೀವು ದೇವರಾಜ್ಯವನ್ನು ವಿಸ್ತರಿಸುವದಕ್ಕಾಗಿ ಎಲ್ಲಿ ಮತ್ತು ಯಾರೊಂದಿಗೆ [ಯಾವ ಜನರ ಗುಂಪುಗಳು] ಯೋಜನೆ ಮಾಡುತ್ತಿದ್ದೀರಿ**?**

**ಕ್ಷೇತ್ರದಲ್ಲಿ ಬೀಜಬಿತ್ತವದು:** ದೇವರ ರಾಜ್ಯದ ಶುಭವಾರ್ತೆಯನ್ನು ಎಲ್ಲಿ ಅಥವಾ ಯಾರೊಂದಿಗೆ ನೀವು ಹಂಚಿಕೊಳ್ಳುತ್ತಿದ್ದೀರಿ**?** ನೀವು ಇದನ್ನು ಹೇಗೆ ಮಾಡುತ್ತಿದ್ದೀರಿ**?**


**ಬೆಳೆಯುತ್ತಿರುವ ಕ್ಷೇತ್ರ:** ನೀವು ಜನರನ್ನು ಹೇಗೆ ಸಜ್ಜುಗೊಳಿಸುತ್ತಿದ್ದೀರಿ ಮತ್ತು ಆತ್ಮಿಕವಾಗಿ**,** ವ್ಯಕ್ತಿಗತವಾಗಿ ಮತ್ತು ತಮ್ಮ ಸ್ವಾಭಾವಿಕ ಜಾಲದಲ್ಲಿ ಹೇಗೆ ಬೆಳೆಸುತ್ತಿದ್ದೀರಿ**?**

**ಸುಗ್ಗಿಯ ಕ್ಷೇತ್ರ:** ಹೊಸ ಆತ್ಮಿಕ ಕುಟುಂಬಗಳು [ಸರಳ ಸಭೆಗಳು] ಹೇಗೆ ಉಂಟಾಗುತ್ತಿವೆ**?**

# ತಲೆಮಾರಿನ ನಕ್ಷೆಯಲ್ಲಿ ಸರಳ ಸಭೆಯನ್ನು ನಿರೂಪಿಸುವ ಮಾದರಿ




ಗುಂಪಿನ ನಾಯಕನ ಹೆಸರು




ಸ್ಥಳ/ಆರಂಭದ ದಿನಾಂಕ

# ಅನುಬಂಧ

## 3/3 ಗುಂಪಿನ ಸರಣಿಗಳು

**ನಿರೀಕ್ಷೆಯ ಸರಣಿಗಳು [ಹುಡುಕುವವರಿಗಾಗಿ]**

ನಿಮ್ಮ ಗುಂಪಿನ "ಮೇಲಕ್ಕೆ ನೋಡಿರಿ" ಎಂಬ ಭಾಗಕ್ಕಾಗಿ ಈ ಕೆಳಗಿನ ವಾಕ್ಯಭಾಗಗಳನ್ನು ನೋಡಿರಿ. ಕೆಲವು ವಾಕ್ಯಭಾಗಗಳಿಗೆ ನಿಮ್ಮ ಗುಂಪಿಗೆ ಒಂದಕ್ಕಿಂತ ಹೆಚ್ಚಿನ ಕೂಟಗಳ ಅಗತ್ಯವಿದೆ.

1. ಪಾಪಿಗಾಗಿ ನಿರೀಕ್ಷೆ: ಲೂಕ 18:9-14
2. ಬಡವಗಾಗಿ ನಿರೀಕ್ಷೆ: ಲೂಕ 12:13-34
3. ದೂರ ಹೋದವರಿಗಾಗಿ ನಿರೀಕ್ಷೆ: ಲೂಕ 15:11-32
4. ಕಳೆದು ಹೋದವರಿಗಾಗಿ ನಿರೀಕ್ಷೆ: ಲೂಕ 19:1-10
5. ದುಃಖಿಸುವವರಿಗಾಗಿ ನಿರೀಕ್ಷೆ: ಯೋಹಾನ 11:1-44
6. ಹುಡುಕುವವರಿಗಾಗಿ ನಿರೀಕ್ಷೆ: ಯೋಹಾನ 3:1-21

---

**ಯೋಹಾನನ ಸೂಚನೆಗಳು [ಹುಡುಕುವವರಿಗಾಗಿ]**

ನಿಮ್ಮ ಗುಂಪಿನ "ಮೇಲಕ್ಕೆ ನೋಡಿರಿ" ಭಾಗಕ್ಕಾಗಿ ಈ ಕೆಳಗಿನ ವಾಕ್ಯಭಾಗಗಳನ್ನು ಉಪಯೋಗಿಸಿ. ಕೆಲವು ವಾಕ್ಯಭಾಗಗಳಿಗೆ ನಿಮ್ಮ ಗುಂಪಿಗೆ ಒಂದಕ್ಕಿಂತ ಹೆಚ್ಚಿನ ಕೂಟಗಳ ಅಗತ್ಯವಿದೆ.

1. ನೀರನ್ನು ದ್ರಾಕ್ಷಾರಸವನ್ನಾಗಿ ಮಾರ್ಪಡಿಸುವದು: ಯೋಹಾನ 2:1-12
2. ಸೇನಾಧಿಪತಿಯ ಮಗನನ್ನು ಗುಣಪಡಿಸಿದ್ದು: ಯೋಹಾನ 4:46-54
3. ಪಾರ್ಶ್ವವಾಯುವನ್ನು ಗುಣಪಡಿಸಿದ್ದು: ಯೋಹಾನ 5:1-17
4. ಐದು ಸಾವಿರ ಜನರಿಗೆ ಪೋಷಿಸಿದ್ದು: ಯೋಹಾನ 6:1-14
5. ನೀರಿನ ಮೇಲೆ ನಡೆಯುವದು: ಯೋಹಾನ 6:15-25
6. ಹುಟ್ಟು ಕುರುಡನನ್ನು ಗುಣಪಡಿಸುವದು. ಯೋಹಾನ 9:1-41
7. ಸತ್ತ ಲಾಜರನನ್ನು ಎಬ್ಬಿಸುವದು: ಯೋಹಾನ 11:1-46

---

**ಆರಂಭದ ಹಾದಿ : ಮೊದಲ 8 ಕೂಟಗಳು**

ಈಗಾಗಲೇ ಕ್ರೈಸ್ತರಾಗಿರುವವರಿಗೆ ಆದರೆ ಇಂಥ ವಿಧವಾದ ಗುಂಪಿನಲ್ಲಿ ಮೊದಲು ಇಲ್ಲದವರಿಗೆ ಸೂಕ್ತವಾಗಿದೆ. ಅಭ್ಯಾಸದ ಭಾಗವನ್ನು ಮಾರ್ಗದರ್ಶಿಸಲಾಗಿದೆ. ಈ ಎಂಟು ಅಧಿವೇಶನಗಳಿಗೆ ವಿಶಿಷ್ಟವಾಗಿದೆ. ಮುಂದೆ ಬರುವ ಕೂಟಗಳಲ್ಲಿ ವ್ಯಕ್ತಿಗತ ಅಭ್ಯಾಸವನ್ನು ಆರಂಭಿಸಲಾಗಿದೆ.

**1. ನಿಮ್ಮ ಕಥೆಯನ್ನು ಹೇಳಿರಿ**

ಮೇಲಕ್ಕೆ ನೋಡಿರಿ: ಮಾರ್ಕ 5:1-20. ವಚನ 18-20 ವಿಶೇಷ ಗಮನವನ್ನು ಕೊಡಿರಿ.

**ಅಭ್ಯಾಸ ಮಾಡಿರಿ:** ನಿಮ್ಮ ಕಥೆಯನ್ನು ಹೇಳಲು ಅಭ್ಯಾಸ ಮಾಡಿರಿ. ನಿಮ್ಮ ಕಥೆಯನ್ನು ನೀವು ಸಿದ್ಧಪಡಿಸಬೇಕಾಗಿದೆ ಮತ್ತು ನೀವು ಜನರಿಗೆ ಯೇಸುವನ್ನು ಕುರಿತು ಹೇಳುವಾಗ ಅದನ್ನು ಹಂಚಿಕೊಳ್ಳಲು ಸಿದ್ಧರಾಗಿರ್ರಿ. ಈ ಕೆಳಗಿನ ರೀತಿಯಲ್ಲಿ ನಿಮ್ಮ ಕಥೆಯನ್ನು ಹೇಳಬಹುದು:

- ಯೇಸುವನ್ನು ಹಿಂಬಾಲಿಸುವದಕ್ಕಿಂತ ಮುಂಚೆ ಇದ್ದ ಜೀವಿತವನ್ನು ಕುರಿತು ಮಾತನಾಡಿರಿ – ನಿಮ್ಮ ಭಾವನೆಗಳನ್ನು [ನೋವು, ಒಂಟಿತನ], ಪ್ರಶ್ನೆಗಳನ್ನು [ಮರಣದ ನಂತರ ಏನಾಗುತ್ತದೆ?], ಅಥವಾ ಯೇಸುವನ್ನು ಹಿಂಬಾಲಿಸುವದಕ್ಕಿಂತ ನಿಮಗಿದ್ದ ಹೋರಾಟಗಳನ್ನು ವಿವರಿಸಿ.
- ನೀವು ಹೇಗೆ ಯೇಸುವಿನ ಹಿಂಬಾಲಕರಾದರೆಂದು ಹೇಳಿರಿ – ಅವರಿಗೆ ಯೇಸುವನ್ನು ಕುರಿತು ಹೇಳಿರಿ! ಯೇಸುವಿನ ಕಥೆಯ ತಾತ್ಪರ್ಯ ಹೀಗಿದೆ: ನಮ್ಮ ಪಾಪಗಳಿಂದ ನಾವೆಲ್ಲರೂ ದೇವರನ್ನು ನೋಯಿಸಿದ್ದೇವೆ. ನಮ್ಮ ಪಾಪಗಳ ನಿಮಿತ್ತ ನಾವು ಸಾಯುತ್ತೇವೆ.
- ಆದರೆ ನಮ್ಮ ಪಾಪಗಳಿಗಾಗಿ, ಸತ್ತು, ಹೂಣಲ್ಪಟ್ಟು ಮತ್ತು ಮರಣದಿಂದ ಎದ್ದ ಯೇಸುವಿನಲ್ಲಿ ನಾವು ನಂಬಿಕೆಯಿಟ್ಟಾಗ ಮರಣದಿಂದ ರಕ್ಷಿಸಲ್ಪಡುತ್ತೇವೆ.
- ಯೇಸುವನ್ನು ಹಿಂಬಾಲಿಸಿದ ನಂತರ ನಿಮ್ಮ ಜೀವಿತವನ್ನು ಕುರಿತು ಮಾತನಾಡಿರಿ – ಯೇಸು ನಿಮ್ಮ ಜೀವಿತವನ್ನು ಹೇಗೆ ಬದಲಾಯಿಸಿದರೆಂದು ಅವರಿಗೆ ಹೇಳಿರಿ. ಯೇಸು ಕೊಟ್ಟ ಸಂತೋಷ, ಸಮಾಧಾನ ಮತ್ತು ಕ್ಷಮಾಪಣೆಯನ್ನು ಕುರಿತು ಹೇಳಿರಿ.
- ಪ್ರತಿಕ್ರಿಯೆಯನ್ನು ಆಮಂತ್ರಿಸಿ – ನಿಮ್ಮ ಕಥೆಯು ನಿಮ್ಮ ಪ್ರತಿಕ್ರಿಯೆಯನ್ನು ಕೇಳಬೇಕು. ಒಬ್ಬ ವ್ಯಕ್ತಿಯ ಆತ್ಮಿಕ ಆಸಕ್ತಿಯ ಮಟ್ಟವನ್ನು ಕಂಡುಕೊಳ್ಳಲು ನಿಮಗೆ ಸಹಾಯಮಾಡುವದಕ್ಕಾಗಿ ಪ್ರಶ್ನೆಯೊಂದಿಗೆ ಕೊನೆಗೊಳಿಸಿ. ಹೀಗೆ ಏನನ್ನಾದರೂ ಕೇಳಿರಿ: "ನಿಮಗೆ ಹೇಗೆ ಕ್ಷಮಿಸಬಹುದೆಂದು ತಿಳಿದುಕೊಳ್ಳಲು ಇಷ್ಟಪಡುವಿರಾ?" ಅಥವಾ "ನಿಮ್ಮ ಜೀವಿತವನ್ನು ದೇವರು ಬದಲಾಯಿಸಬೇಕೆಂದು ನೀವು ಇಷ್ಟಪಡುವಿರಾ?"
- ಅದನ್ನು ಸಂಕ್ಷಿಪ್ತವಾಗಿ ಮಾಡಿರಿ [3 ನಿಮಿಷಗಳು ಅಥವಾ ಕಡಿಮೆ] – ನಿಮ್ಮ ಕಥೆಯು ಚಿಕ್ಕದಾಗಿ ಮತ್ತು ಆಸಕ್ತಿಕರವಾಗಿರಬೇಕು. ಬೇಸರವಾಗಿರದೆ ಮತ್ತು ಕೇಳುಗರು ಆಸಕ್ತಿಯನ್ನು ಕಳೆದುಕೊಳ್ಳದಂತೆ ಬಹಳ ಉದ್ದವಾಗಿ ಮಾತನಾಡಬೇಡಿರಿ.
- ನಿಮ್ಮ ಗುಂಪಿನಲ್ಲಿರುವ ಯಾರೊಂದಿಗಾದರೂ ನಿಮ್ಮ ಕಥೆಯನ್ನು ಹಂಚಿಕೊಳ್ಳಿರಿ. ಹಂಚಿಕೊಳ್ಳಲು ಅಭ್ಯಾಸ ಮಾಡಿರಿ.

---

**2. ಯೇಸುವಿನ ಕಥೆಯನ್ನು ಹೇಳಿರಿ**

**ಮೇಲಕ್ಕೆ ನೋಡಿರಿ:** 1 ಕೊರಿಂಥ 15:1-8, ರೋಮಾ 3:23, ರೋಮಾ 6:23

**ಅಭ್ಯಾಸ ಮಾಡಿರಿ:** ಇವ್ಯಾಂಜ್ ಕ್ಯೂಬ್ ಅಥವಾ ಬೇರೆ ಸರಳವಾದ ವಿಧಾನವನ್ನು ಉಪಯೋಗಿಸಿ ಯೇಸುವಿನ ಕಥೆಯನ್ನು ಹೇಳಲು ನಿಮ್ಮ ಗುಂಪಿನಲ್ಲಿರುವ ಪ್ರತಿಯೊಬ್ಬರು ಅಭ್ಯಾಸ ಮಾಡಲಿ. ಈ ವಾರದಲ್ಲಿ ನಿಮ್ಮ ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು 5 ಜನರಿಗೆ ಹೇಳಿರಿ. ಇದನ್ನು ಪ್ರತಿವಾರ ಮಾಡಿರಿ.

---

**3. ಹಿಂಬಾಲಿಸಿ ಮತ್ತು ಮೀನು ಹಿಡಿಯಿರಿ**

**ಮೇಲಕ್ಕೆ ನೋಡಿರಿ:** ಮಾರ್ಕ 1:16-20

**ಅಭ್ಯಾಸಮಾಡಿರಿ:** ಪಟ್ಟಿ ಮಾಡಿರಿ – ಖಾಲಿ ಹಾಳೆಯನ್ನು ತೆಗೆದುಕೊಂಡು ಯೇಸುವನ್ನು ಕುರಿತು ಕೇಳಬೇಕಾಗಿರುವವರಲ್ಲಿ ನಿಮಗೆ ತಿಳಿದಿರುವ [ಕುಟುಂಬ, ಸ್ನೇಹಿತರು, ನೆರೆಯವರು, ಜೊತೆಕೆಲಸದವರು, ಅಥವಾ ಶಾಲಾ ಸಹಪಾಠಿಗಳು] 100 ಜನರ ಹೆಸರನ್ನು ತೆಗೆದುಕೊಂಡು ಬರೆಯಿರಿ. ಈ ವಾರದಲ್ಲಿ ನಿಮ್ಮ ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು 5 ಜನರಿಗೆ ಹೇಳಿರಿ ಇದನ್ನು ಪ್ರತಿವಾರ ಮಾಡಿರಿ.

---

**4. ದೀಕ್ಷಾಸ್ನಾನ**

**ಮೇಲಕ್ಕೆ ನೋಡಿರಿ:** ರೋಮಾ 6:3-4; ಅಪೊಸ್ತಲರ ಕೃತ್ಯ 8:26-40

**ಅಭ್ಯಾಸ ಮಾಡಿರಿ:** ಹತ್ತಿರದಲ್ಲಿರುವ ನೀರಿನ [ಸ್ನಾನದ ತೊಟ್ಟಿ, ಕೊಳ, ನದಿ, ಕೆರೆ] ಕಂಡುಕೊಂಡು ಹೊಸ ವಿಶ್ವಾಸಿಗಳಿಗೆ ದೀಕ್ಷಾಸ್ನಾನ ಮಾಡಿಸಿರಿ. ಜನರು ವಿಶ್ವಾಸಿಗಳಾದ ಕೂಡಲೇ ದೀಕ್ಷಾಸ್ನಾನ ಮಾಡಿಸಲು ಮುಂದುವರೆಸಿ. ದೀಕ್ಷಾಸ್ನಾನವನ್ನು ಕುರಿತು ಹೆಚ್ಚಾಗಿ ಕಲಿಯಲು, ಅಪೊಸ್ತಲರ ಕೃತ್ಯ 2:37-41, 8:5-13, 8:36-38, 9:10-19, 10:47-48, 16:13-15, 16:27-34, ಅಪೊಸ್ತಲರ ಕೃತ್ಯ 18:5-9 ಮತ್ತು 1 ಕೊರಿಂಥ 1:10-17,ಅಪೊಸ್ತಲರ ಕೃತ್ಯ 19:1-5, ಅಪೊಸ್ತಲರ ಕೃತ್ಯ 22:14-17.

ಈ ವಾರದಲ್ಲಿ ನಿಮ್ಮ ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು 5 ಜನರಿಗೆ ಹೇಳಿರಿ. ಇದನ್ನು ಪ್ರತಿವಾರ ಮಾಡಿರಿ.

---

**5. ಸತ್ಯವೇದ**

**ಮೇಲಕ್ಕೆ ನೋಡಿರಿ:** 2 ತಿಮೊಥೆ 3:14-16

**ಅಭ್ಯಾಸಮಾಡಿರಿ:** ಸತ್ಯವೇದ ಅಧ್ಯಯನದ ಏಳು ಪ್ರಶ್ನೆಗಳನ್ನು ಕಂಠಪಾಠ ಮಾಡಿ ಮತ್ತು ಪಠಿಸಿರಿ [ಸರಳ ಕೂಟದ ಮಾದರಿಯಲ್ಲಿರುವ 1-7 ಪ್ರಶ್ನೆಗಳು]. ಈ ವಾರದಲ್ಲಿ ನಿಮ್ಮ ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು 5 ಜನರಿಗೆ ಹೇಳಿರಿ. ಇದನ್ನು ಪ್ರತಿವಾರ ಮಾಡಿರಿ.

---

**6. ದೇವರೊಂದಿಗೆ ಮಾತನಾಡಿ**

**ಮೇಲಕ್ಕೆ ನೋಡಿರಿ:** ಮತ್ತಾಯ 6:9-13

**ಅಭ್ಯಾಸಮಾಡಿರಿ:** ದೇವರೊಂದಿಗೆ ಹೇಗೆ ಮಾತಾಡಬೇಕೆಂದು ಕಲಿಯಲು ನಿಮ್ಮ ಹಸ್ತವನ್ನು ಉಪಯೋಗಿಸಿ. ಗುಂಪಿನಲ್ಲಿರುವವರು ಮತ್ತಾಯ 6:9-13 ರಲ್ಲಿರುವ ಯೇಸುವಿನ ಪ್ರಾರ್ಥನೆಯನ್ನು ಮಾಡುವಾಗ ನಿಮ್ಮ ಕೈಯನ್ನು ಮಾರ್ಗದರ್ಶಿಯಾಗಿ ಉಪಯೋಗಿಸಿ.

1. **ಅಂಗೈ = ಸಂಬಂಧ.** ನಮ್ಮ ಬೆರಳುಗಳಿಗೆ ಮತ್ತು ಹೆಬ್ಬೆರಳಿಗೆ ಅಂಗೈ ಅಸ್ತಿವಾರವಾಗಿರುವಂತೆ, ದೇವರೊಂದಿಗೆ ಏಕಾಂಗಿಯಾಗಿ ಕಳೆಯುವ ಸಮಯವು ಆತನೊಂದಿಗೆ ನಮ್ಮ ವೈಯಕ್ತಿಕ ಸಂಬಂಧಕ್ಕೆ ಅಸ್ತಿವಾರವಾಗಿದೆ. "ಪರಲೋಕದಲ್ಲಿರುವ ನಮ್ಮ ತಂದೆಯೇ..." [ಮತ್ತಾಯ 6:9].

2. **ಹೆಬ್ಬೆರಳು = ಆರಾಧನೆ.** ನಾವು ಏನನ್ನಾದರೂ ಬೇಡಿಕೊಳ್ಳುವದಕ್ಕಿಂತ ಮುಂಚಿತವಾಗಿ ದೇವರನ್ನು ಆರಾಧಿಸಬೇಕೆಂದು ನಮ್ಮ ಹೆಬ್ಬೆರಳು ನೆನಪಿಸುತ್ತದೆ. "...ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ." [ಮತ್ತಾಯ 6:9]
3. **ಮೊದಲ ಬೆರಳು = ಒಪ್ಪಿಸುವಿಕೆ.** ನಂತರ ನಾವು ನಮ್ಮ ಜೀವಿತವನ್ನು, ಯೋಜನೆಯನ್ನು ಕುಟುಂಬವನ್ನು, ಹಣಕಾಸು, ಕೆಲಸ, ಭವಿಷ್ಯತ್ತು ಎಲ್ಲವನ್ನು ಒಪ್ಪಿಸುತ್ತೇವೆ. "ನಿನ್ನ ರಾಜ್ಯವೂ ಬರಲಿ ನಿನ್ನ ಚಿತ್ತವು ನೆರವೇರಲಿ..." [ಮತ್ತಾಯ 6:10]
4. **ಮಧ್ಯೆ ಬೆರಳು = ಬೇಡಿಕೊಳ್ಳಿರಿ.** ನಮ್ಮ ಅಗತ್ಯತೆಗಳನ್ನು ಪೂರೈಸಲು ದೇವರನ್ನು ಬೇಡಿಕೊಳ್ಳಿರಿ. "ನಮ್ಮ ಅನುದಿನ ಆಹಾರವನ್ನು ಈ ಹೊತ್ತು ದಯಪಾಲಿಸು." [ಮತ್ತಾಯ 6:11]
5. **ನಾಲ್ಕನೆಯ ಬೆರಳು = ಕ್ಷಮಿಸಿ.** ಈಗ ನಮ್ಮ ಪಾಪಗಳನ್ನು ಕ್ಷಮಿಸಬೇಕೆಂದು ದೇವರನ್ನು ಬೇಡಿಕೊಳ್ಳುತ್ತೇವೆ ಮತ್ತು ನಾವು ಇತರರನ್ನು ಕ್ಷಮಿಸಬೇಕಾಗಿದೆ. "ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು." [ಮತ್ತಾಯ 6:12]
6. **ಚಿಕ್ಕ ಬೆರಳು = ಕಾಪಾಡುವದು.** ನಂತರ ನಾವು ಕಾಪಾಡಲು ಬೇಡಿಕೊಳ್ಳುತ್ತೇವೆ. "ಶೋಧನೆಗೆ ಒಳಗಾಗದಂತೆ ಕೇಡಿನಿಂದ ತಪ್ಪಿಸು." [ಮತ್ತಾಯ 6:13]
7. **ಹೆಬ್ಬೆರಳು [ತಿರಿಗಿ] = ಆರಾಧನೆ.** ನಾವು ಸರ್ವಶಕ್ತನಾದ ದೇವರನ್ನು ಆರಾಧಿಸಿ ಆರಂಭಿಸಿದಂತೆ ಮುಗಿಸುತ್ತೇವೆ. – "ರಾಜ್ಯವೂ ಮಹಿಮೆಯೂ ಬಲವೂ ಸದಾಕಾಲ ನಿನ್ನವೇ. ಆಮೆನ್" [ಮತ್ತಾಯ 6:13] .

ನಿಮ್ಮ ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು ಈ ವಾರದಲ್ಲಿ 5 ಜನರಿಗೆ ಹೇಳಿರಿ. ಇದನ್ನು ಪ್ರತಿವಾರ ಮಾಡಿರಿ.

---

**7. ಕಠಿನವಾದ ಸಮಯಗಳು**

**ಮೇಲಕ್ಕೆ ನೋಡಿರಿ:** ಅಪೊಸ್ತಲರ ಕೃತ್ಯಗಳು 5:17-42; ಮತ್ತಾಯ 5:43-44


**ಅಭ್ಯಾಸ ಮಾಡಿರಿ:** ನಿಮ್ಮ ಹೊಸ ನಂಬಿಕೆಯ ನಿಮಿತ್ತ ನೀವು ಎದುರಿಸಿದ ಸಮಸ್ಯೆಯನ್ನು ಕುರಿತು ಗುಂಪಿನೊಂದಿಗೆ ಹಂಚಿಕೊಳ್ಳಿರಿ; ನೀವು ಎದುರಿಸಬೇಕಾದ ಸಮಸ್ಯೆಗಳನ್ನು ಪರಿಹರಿಸಿ; ಯೇಸು ಬೋಧಿಸಿದಂತೆ ನೀವು ಧೈರ್ಯ ಮತ್ತು ಪ್ರೀತಿಯಿಂದ ಹೇಗೆ ಪ್ರತಿಕ್ರಿಯಿಸುವಿರಿ ಎಂದು ನಾಟಕ ಮಾಡಿರಿ. ಅಗತ್ಯತೆಗಳು ಬಂದಾಗ ಪ್ರಾರ್ಥಿಸಿ. ಅವರು ಹಂಚಿಕೊಂಡ ನಂತರ ಪ್ರತಿಯೊಬ್ಬರಿಗೂ ಪ್ರಾರ್ಥಿಸಿ. ನಿಮ್ಮ ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು ಈ ವಾರದಲ್ಲಿ 5 ಜನರಿಗೆ ಹೇಳಿರಿ. ಇದನ್ನು ಪ್ರತಿವಾರ ಮಾಡಿರಿ.

---

**8. ಸಭೆಯಾಗಿರಿ**

**ಮೇಲಕ್ಕೆ ನೋಡಿರಿ:** ಅಪೊಸ್ತಲರ ಕೃತ್ಯಗಳು 2:42-47, 1 ಕೊರಿಂಥ 11:23-34

**ಅಭ್ಯಾಸಮಾಡಿರಿ:** ಈ ವಾಕ್ಯಭಾಗದಲ್ಲಿ ವಿವರಿಸಿದಂತೆ ಸಭೆಯಾಗಿರಲು ನಿಮ್ಮ ಗುಂಪು ಏನು ಮಾಡಬೇಕಾಗಿದೆ ಎಂದು ಚರ್ಚಿಸಿ. ಗುಂಪಾಗಿ ಒಂದು ಖಾಲಿ ಹಾಳೆಯಾಗಿ ನಿಮ್ಮ ಸ್ವಂತ ಗುಂಪನ್ನು ಪ್ರತಿನಿಧಿಸಿ ಚುಕ್ಕೆ ರೇಖೆಯ ವೃತ್ತವನ್ನು ಎಳೆಯಿರಿ. ಅದರ ಮೇಲೆ ಮೂರು ಸಂಖ್ಯೆಗಳನ್ನು ಪಟ್ಟಿಮಾಡಿಃ ಕ್ರಮವಾಗಿ ಹಾಜರಾಗುವವರ ಸಂಖ್ಯೆ [ಕೋಲಿನ ಚಿತ್ರ], ಯೇಸುವಿನಲ್ಲಿ ನಂಬಿಕೆಯಿಡುವ ಸಂಖ್ಯೆ [ಶಿಲುಬೆ] ಮತ್ತು ನಂಬಿದ ನಂತರ ದೀಕ್ಷಾಸ್ನಾನ ಹೊಂದಿದವರ ಸಂಖ್ಯೆ [ನೀರು].



ನಿಮ್ಮ ಗುಂಪು ಸಭೆಯಾಗಿರಲು ಸಮರ್ಪಸಿಕೊಂಡಿದ್ದರೆ, ಚುಕ್ಕೆ ಹಾಕಿರುವ ವೃತ್ತವನ್ನು ತುಂಬಿರಿ. ಈ ಕೆಳಗಿನ ಅಂಶಗಳನ್ನು ನೀವು ಕ್ರಮವಾಗಿ ಅಭ್ಯಾಸ ಮಾಡಿದರೆ ಆಗ ನಿನ್ನ ವೃತ್ತದೊಳಗಿರುವ ಅಂಶಗಳ ಚಿತ್ರವನ್ನು ಬರೆಯಿರಿ. ನೀವು ಅಂಶವನ್ನು ಮಾಡದೆ ಇದ್ದರೆ ಅಥವಾ ಹೊರಗಿನವರು ಬಂದು ಅದನ್ನು ಮಾಡಲು ಕಾದುಕೊಂಡಿದ್ದರೆ, ಆಗ ಆ ಅಂಶವನ್ನು ವೃತ್ತದ ಹೊರಗೆ ಬರೆಯಿರಿ.



1. ಸಭೆಯಾಗಿರಲು ಸಮರ್ಪಣೆ: ಚುಕ್ಕೆಯ ರೇಖೆಗೆ ಬದಲಾಗಿ ತುಂಬಿದ ರೇಖೆ.
2. ದೀಕ್ಷಾಸ್ನಾನ – ನೀರು
3. ಸತ್ಯವೇದ – ಪುಸ್ತಕ
4. ಯೇಸುವಿನ ರೊಟ್ಟಿ ಮತ್ತು ನೀರು – ಪಾತ್ರೆಯನ್ನು ನೆನಪಿಸಿಕೊಳ್ಳಿರಿ
5. ಅನ್ಯೋನ್ಯತೆ – ಹೃದಯ
6. ಕೊಡುವದು ಮತ್ತು ಸೇವೆ – ಹಣದ ಸೂಚನೆ
7. ಪ್ರಾರ್ಥನೆ – ಪ್ರಾರ್ಥಿಸುವ ಹಸ್ತಗಳು
8. ಸ್ತುತಿ – ಎತ್ತಿದ ಹಸ್ತಗಳು
9. ಜನರಿಗೆ ಹೆಸರನ್ನು ಕುರಿತು ಹೇಳುವದು – ನಂಬಿಕೆಗೆ ನಡೆಸಿದ ಸ್ನೇಹಿತನೊಂದಿಗೆ ಒಬ್ಬ ಸ್ನೇಹಿತನು ಹಸ್ತಗಳನ್ನು ಹಿಡಿದುಕೊಳ್ಳುವದು
10. ನಾಯಕರು – ಎರಡು ನಗುವ ಮುಖಗಳು

ಆರೋಗ್ಯಕರ ಸಭೆಯನ್ನಾಗಿ ಮಾಡಲು ಸಹಾಯ ಮಾಡುವದಕ್ಕಾಗಿ ನಿಮ್ಮ ಗುಂಪು ಯಾವುದನ್ನು ಕಳೆದುಕೊಂಡಿದೆ?

ಕಥೆಯನ್ನು ಮತ್ತು ಯೇಸುವಿನ ಕಥೆಯನ್ನು ಈ ವಾರದಲ್ಲಿ 5 ಜನರಿಗೆ ಹೇಳಿರಿ. ಇದನ್ನು ಪ್ರತಿವಾರ ಮಾಡಿರಿ.

---

**ಮುಂದೆ ಎಲ್ಲಿ ಸೇರುವದು?**

3/3 ಅನ್ವೇಷಣೆ ಅಥವಾ 3/3 ಬಲ (ಈ ಕೆಳಗೆ ಕೊಡಲ್ಪಟ್ಟಿದೆ) ನೋಡಿರಿ ಅಥವಾ ಯೋಹಾನ ಅಥವಾ ಮಾರ್ಕ ಇಂಥ ಸತ್ಯವೇದದ ಪುಸ್ತಕವನ್ನು ಆರಿಸಿಕೊಳ್ಳಿರಿ [ಒಂದು ಕೂಟಕ್ಕೆ ಕೇವಲ ಒಂದು ಕಥೆಯನ್ನು ಆರಿಸಿಕೊಳ್ಳಿರಿ]

---

**ಅನ್ವೇಷಣೆಯ ಸರಣಿಗಳು**

[ಸತ್ಯವೇದದ ಹಿನ್ನಲೆ ಮತ್ತು ಪರಿಚಯದ ಅಗತ್ಯವಿರುವ ಗುಂಪಿಗೆ]

ನಿಮ್ಮ ಗುಂಪಿನ “ಮೇಲಕ್ಕೆ ನೋಡಿರಿ” ಎಂಬ ಭಾಗಕ್ಕಾಗಿ ಈ ಕೆಳಗಿನ ವಾಕ್ಯಭಾಗಗಳನ್ನು ಉಪಯೋಗಿಸಿರಿ. ಕೆಲವು ವಾಕ್ಯಭಾಗಗಳಿಗೆ ನಿಮ್ಮ ಗುಂಪು ಒಂದಕ್ಕಿಂತ ಹೆಚ್ಚು ಸಾರಿ ಸೇರಬೇಕಾಗಿರುತ್ತದೆ.

---

**ದೇವರನ್ನು ಅನ್ವೇಷಿಸಿ -** ದೇವರು ಯಾರು ಮತ್ತು ಆತನು ಹೇಗಿದ್ದಾನೆ

1. ಸೃಷ್ಟಿ – ಆದಿಕಾಂಡ 1
2. ಜನರನ್ನು ಉಂಟುಮಾಡಿದ್ದು – ಆದಿಕಾಂಡ 2
3. ಜನರ ಅವಿಧೇಯತೆ – ಆದಿಕಾಂಡ 3
4. ನೋಹ ಮತ್ತು ಜಲಪ್ರಳಯ– ಆದಿಕಾಂಡ 6:5-8:14
5. ನೋಹನೊಂದಿಗೆ ದೇವರ ವಾಗ್ದಾನ – ಆದಿಕಾಂಡ 8:15-9:17
6. ಅಬ್ರಹಾಮನೊಂದಿಗೆ ದೇವರು ಮಾತನಾಡುವದು – ಆದಿಕಾಂಡ 12:1-7, 15:1-6
7. ಅಬ್ರಹಾಮನ ಸಂತತಿಯವರಿಗೆ ದಾವೀದನು ಅರಸನಾದನು-1 ಸಮುವೇಲ 16:1-13; 2 ಸಮುವೇಲ 7:1-28
8. ರಾಜನಾದ ದಾವೀದನು ಮತ್ತು ಬತ್ಷೇಬಳು – 2 ಸಮುವೇಲ 11:1-27
9. ನಾತಾನನ ಕಥೆ – 2 ಸಮುವೇಲ 12:1-25
10. ರಕ್ಷಕನು ಬರುವನೆಂದು ದೇವರು ವಾಗ್ದಾನ ಮಾಡಿದನು – ಯೆಶಾಯ 53

**ಯೇಸುವನ್ನು ಅನ್ವೇಷಿಸಿ** - ದೇವರು ಯಾರು ಮತ್ತು ಆತನು ಹೇಗಿದ್ದಾನೆ

1. ರಕ್ಷಕನ ಜನನ – ಮತ್ತಾಯ 1:18-25
2. ಯೇಸುವಿನ ದೀಕ್ಷಾಸ್ನಾನ–ಮತ್ತಾಯ 3:7-9, 13-15
3. ದೆವ್ವಹಿಡಿದವನನ್ನು ಗುಣಪಡಿಸಿದನು – ಮಾರ್ಕ 5:1-20
4. ಯೇಸು ಕುರಿಯನ್ನು ಎಂದಿಗೂ ಕಳೆದುಕೊಳ್ಳುವದಿಲ್ಲ – ಯೋಹಾನ 10:1-30

5. ಕುರುಡನನ್ನು ಗುಣಪಡಿಸಿದನು – ಲೂಕ 18:31-48
6. ಯೇಸು ಮತ್ತು ಜಕ್ಕಾಯನು – ಲೂಕ 19:1-9
7. ಯೇಸು ಮತ್ತು ಮತ್ತಾಯ – ಮತ್ತಾಯ 9:9-13
8. ಯೇಸುವೇ ಒಂದೇ ಮಾರ್ಗ – ಯೋಹಾನ 14:1-15
9. ಪವಿತ್ರಾತ್ಮನ ಬರೋಣ – ಯೋಹಾನ 16:5-15
10. ಕಡೆಯ ಭೋಜನ – ಲೂಕ 22:14-20
11. ಸೆರೆಹಿಡಿಯಲ್ಪಟ್ಟದ್ದು ಮತ್ತು ನ್ಯಾಯವಿಚಾರಣೆ ಲೂಕ 22:47-53; 23:13-24
12. ಮರಣ ದಂಡನೆ – ಲೂಕ 23:33-56
13. ಯೇಸು ಬದುಕಿದ್ದಾನೆ – ಲೂಕ 24:1-7, 36-47; ಅಪೊಸ್ತಲರ ಕೃತ್ಯ 1:1-11
14. ನಂಬುವದು ಮತ್ತು ಮಾಡುವದು – ಫಿಲಿಪ್ಪಿ 3:3-9

---

**ಬಲಪಡಿಸುವ ಸರಣಿಗಳು**

[ಶಿಷ್ಯರನ್ನಾಗಿ ಮಾಡಲು ಕೇಂದ್ರಿಕರಿಸಬೇಕಾದ ಹೊಸ ವಿಶ್ವಾಸಿಗಳು ಅಥವಾ ಗುಂಪುಗಳು]

**ಯೇಸು ಹೇಳಿದ್ದು –** ಯೇಸುವಿನ ಮೂಲ ಆಜ್ಞೆಗಳಿಗೆ ವಿಧೇಯರಾಗಲು ಕಲಿತುಕೊಳ್ಳಿರಿ. ನಿಮ್ಮ ಪಟ್ಟಿಯಲ್ಲಿರುವ ಜನರಿಗೆ ಯೇಸುವನ್ನು ಕುರಿತು ಹಂಚಿಕೊಳ್ಳುತ್ತಿರಿ.

**1.1** ಕಲಿಯಿರಿ ಮತ್ತು ಮಾಡಿರಿ – ಯೋಹಾನ 14:15-21!
**1.2** ಪಶ್ಚಾತ್ತಾಪಪಡಿರಿ. ನಂಬಿರಿ. ಹಿಂಬಾಲಿಸಿರಿ. – ಮಾರ್ಕ 1:14-17, ಎಫೆಸ 2:1-10
**1.3** ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ – ಮತ್ತಾಯ 28:19, ಅಪೊಸ್ತಲರ ಕೃತ್ಯಗಳು 8:26-38
**1.4** ದೇವರನ್ನು ಪ್ರೀತಿಸಿರಿ. ಜನರನ್ನು ಪ್ರೀತಿಸಿರಿ – ಲೂಕ 10:25-37

---

**ಯೇಸು ಹೀಗೆ ಸಹ ಹೇಳಿದನು -** ಯೇಸುವಿನ ಮೂಲ ಆಜ್ಞೆಗಳಿಗೆ ವಿಧೇಯರಾಗಲು ಕಲಿತುಕೊಳ್ಳಿರಿ. ನಿಮ್ಮ ಪಟ್ಟಿಯಲ್ಲಿರುವ ಜನರಿಗೆ ಯೇಸುವನ್ನು ಕುರಿತು ಹಂಚಿಕೊಳ್ಳುತ್ತಿರಿ.

**2.1** ದೇವರೊಂದಿಗೆ ಮಾತನಾಡಿರಿ – ಮತ್ತಾಯ 6:9-13. ಯೇಸುವಿನ ಮಾದರಿ ಪ್ರಾರ್ಥನೆಯನ್ನು ಕಲಿತು ಅಭ್ಯಾಸ ಮಾಡಿರಿ.
**2.2** ಯೇಸುವನ್ನು ನೆನಪಿಸಿಕೊಂಡು ಸ್ಮರಿಸಿರಿ – ಲೂಕ 22:14-22, 1 ಕೊರಿಂಥ 11:23-32
**2.3** ಕೊಡಿರಿ – ಅಪೊಸ್ತಲರ ಕೃತ್ಯ 4:32-37
**2.4** ಮುಂದಕ್ಕೆ ಸಾಗಿಸಿರಿ – ಮತ್ತಾಯ 28:18-22

---

**ನಾನು ಅನುಸರಿಸಿದಂತೆಯೇ ಅನುಸರಿಸಿ –** ಶಿಷ್ಯರನ್ನಾಗಿ ಮಾಡಿರಿ. ನೀವು ಕಲಿತದ್ದನ್ನು ಇತರರಿಗೆ ತಿಳಿಯಪಡಿಸಿ. ಇವರು ಸಹ ಇತರ ಜನರಿಗೆ ಸಾಧಿಸಲು ಬೋಧಿಸಿ.

**3.1** ಶಿಷ್ಯನನ್ನು ಕಂಡುಕೊಳ್ಳಿರಿ – 2 ತಿಮೊಥೆ 1:1-14

**3.2** ಮುಂದಕ್ಕೆ ಸಾಗಿಸಿ – 2 ತಿಮೊಥೆ 2:1-4, 14-16

**3.3** ಇತರರಿಗೆ ಬೋಧಿಸಲು ಅವರಿಗೆ ಉಪದೇಶ ಮಾಡಿರಿ – 2 ತಿಮೊಥೆ 3:1-17, ಕಠಿನ ಸಮಯಗಳು - 2 ತಿಮೊಥೆ 4:1-22

---

**ನಿಮ್ಮ 3/3 ಗುಂಪನ್ನು ಹೆಚ್ಚಿಸಿ –** ನಿಮ್ಮ ಶಿಷ್ಯರನ್ನು ಹೊಸ ಗುಂಪುಗಳಿಗೆ ಸೇರಿಸಿರಿ

**4.1** ಆರಂಭಿಸಿ ಮತ್ತು ಒಂದು ಯೋಜನೆಯನ್ನು ಮಾಡಿ – ಲೂಕ 10:1-11. ನೀವು ಹೊಸ ಗುಂಪನ್ನು ಆರಂಭಿಸುವಾಗ ಯೇಸುವಿನ ಸೂಚನೆಗಳಿಗೆ ಕಿವಿಗೊಡಿರಿ.

**4.2** ಒಟ್ಟಾಗಿ ಸೇರಿರಿ – ಅಪೊಸ್ತಲರ ಕೃತ್ಯ 2:14-47

**4.3** ಸಮಾಧಾನದ ವ್ಯಕ್ತಿ – ಮಾರ್ಕ 5:1-20, 6:53-56. ಯೇಸುವನ್ನು ಕುರಿತು ತಮ್ಮ ಕಥೆಯನ್ನು ಹಂಚಿಕೊಳ್ಳಲು ಸಿದ್ಧರಾಗಿರುವ ಜನರನ್ನು ಕಂಡುಕೊಳ್ಳಿರಿ. ಆ ವ್ಯಕ್ತಿ, ಮತ್ತು ಅವರ ಸ್ನೇಹಿತರು ಮತ್ತು ಕುಟುಂಬದವರಿಂದ ಗುಂಪನ್ನು ಆರಂಭಿಸಿ.

**4.4** ಯಾರು ಸಿದ್ಧರಾಗಿದ್ದಾರೆ – ಮತ್ತಾಯ 13:1-9, 18-23

---

**ನಡೆಸಿ** – 3/3 ಗುಂಪನ್ನು ಹೇಗೆ ನಡೆಸಬೇಕೆಂದು ಕಲಿತುಕೊಳ್ಳಿರಿ.

5.1 ಮಾದರಿ [ಹೀಗೆ ನಡೆಸಿರಿ] – ಯೋಹಾನ 13:1-17

5.2 ಮಾದರಿ[ಹೀಗೆ ನಡೆಸಬೇಡಿರಿ]- 3ಯೋಹಾನ 5-14

5.3 ಸಹಾಯಮಾಡಿರಿ – ಮಾರ್ಕ 4:35-41

5.4 ವೀಕ್ಷಿಸಿ - ಲೂಕ 10:1-11, 17,20

5.5 ಬಿಟ್ಟುಬಿಡಿ - ಮತ್ತಾಯ 25:14-30

---

**ಹೋಗಿರಿ: ಸ್ಥಳೀಯ** – ನಿಮ್ಮ ಸ್ಥಳೀಯ ಸಮುದಾಯವನ್ನು ಹೇಗೆ ತಲುಪಬೇಕೆಂದು ಕಲಿತುಕೊಳ್ಳಿರಿ.

**6.1** ಹೋಗಿರಿ: ಸ್ಥಳೀಯ – ಅಪೊಸ್ತಲರ ಕೃತ್ಯ 1:1-8

**6.2** ಬಡವರಿಗೆ ಸಹಾಯಮಾಡಿರಿ. ಶುಭವಾರ್ತೆಯನ್ನು ಹಂಚಿಕೊಳ್ಳಿರಿ – ಲೂಕ 7:11-13

**6.3** ದೇವರು ಕಳುಹಿಸುವ ಕಡೆಗೆ ಹೋಗಿರಿ – ಅಪೊಸ್ತಲರ ಕೃತ್ಯ 10:9-48

**6.4** ಯೋಜನೆಯೊಂದಿಗೆ ಹೋಗಿರಿ – ಅಪೊಸ್ತಲರ ಕೃತ್ಯ 13:1-3, 32-33, 38-39; 4:21-23, 26-27

---

**ಹೋಗಿರಿ: ಪ್ರಪಂಚ** – ಭೂಮಿಯ ಕಟ್ಟಕಡೆಗಳನ್ನು ಹೇಗೆ ತಲುಪಬೇಕೆಂದು ಕಲಿತುಕೊಳ್ಳಿರಿ.

**7.1** ಹೋಗಿರಿ: ಪ್ರಪಂಚ – ಅಪೊಸ್ತಲರ ಕೃತ್ಯ 1:1-8, ಮತ್ತಾಯ 28:19-20

**7.2** ದೇವರು ಕಳುಹಿಸುವ ಕಡೆಗೆ ಹೋಗಿರಿ - ಅಪೊಸ್ತಲರ ಕೃತ್ಯ 8:26-38

**7.3** ದೇವರು ಪ್ರತಿಯೊಂದು ಜನರ ಗುಂಪನ್ನು ಪ್ರೀತಿಸುತ್ತಾನೆ – ಯೋಹಾನ 4:4-30, 39-41, ಯೋಜನೆಯೊಂದಿಗೆ ಹೋಗಿರಿ - ಅಪೊಸ್ತಲರ ಕೃತ್ಯ 13:1-3,32-33,38-39;14:21-23,26-27

---

**ಮೂಲ ಸಂಗತಿಗಳನ್ನು ನೆನಪಿಡಿ** – ನೀವು ಕೂಡಿದಾಗ ಏನು ಮಾಡಬೇಕೆಂದು ಕಲಿತುಕೊಳ್ಳಿರಿ.

**8.1** ಯೇಸು ಮೊದಲು – ಫಿಲಿಪ್ಪಿ 2:1-11

**8.2** ದೇವರೊಂದಿಗೆ ಮಾತನಾಡಿ – ಮತ್ತಾಯ 6:9-13

**8.3** ಸಮಾಜ – ಇಬ್ರಿಯ 10:23-25

**8.4** ಸತ್ಯವೇದ – 2 ತಿಮೊಥೆ 3:10-17

---

**ಸಮರ್ಪಣೆ –** ಬಲವಾಗಿರಲು ಕಲಿತುಕೊಳ್ಳಿರಿ ಮತ್ತು ಯೇಸುವನ್ನು ಹಿಂಬಾಲಿಸಿರಿ.

**9.1** ಅವಿಧೇಯತೆ – ಯೋನ 1

**9.2** ಸಮರ್ಪಣೆ – ಯೋನ 2

**9.3** ವಿಧೇಯರಾಗಿರಿ – ಯೋನ 3

**9.4** ಕಡೆಯವರೆಗೂ ವಿಧೇಯರಾಗಿರಿ – ಯೋನ 4

**9.5** ಅದನ್ನು ಉಪಯೋಗಿಸಿ ಅಥವಾ ಅದನ್ನು ಕಳೆದುಕೊಳ್ಳಿರಿ – ಮತ್ತಾಯ 25:14-30

**ಮುಂದೆ ಎಲ್ಲಿ ಕೂಡುವದು?**

ನಿಮ್ಮ ಸ್ವಂತ ಸತ್ಯವೇದ ವಾಕ್ಯಭಾಗವನ್ನು ಆರಿಸಿಕೊಂಡು ಕೂಡುತ್ತಲೇ ಇರ್ರಿ. ಅದೇ ಪ್ರಶ್ನೆಗಳನ್ನು ಮತ್ತು 3/3 ಗುಂಪಿನ ಕೂಟದ ಮಾದರಿಯನ್ನು ಉಪಯೋಗಿಸಿ. ಕೂಡುವದನ್ನು ನಿಲ್ಲಿಸಬೇಡಿರಿ.

ಶಿಷ್ಯರನ್ನು ಹೆಚ್ಚಿಸುವುದು